www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–10 ಸಂಚಿಕೆ–03 ಎಪ್ರಿಲ್ 2016
Volume : X Issue : 03 April 2016

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಬೇತೇಲ್ ಅಂಕಣ
3 ಪ್ರಾರ್ಥನಾ ಮನವಿಗಳು
4. ಸ್ಥಳೀಯ ಮತ್ತು ವಿದೇಶ ಸುದ್ಧಿ
5. ಬಿಡುಗಡೆಯ ಕುಟುಂಬ
6. ಆರೋಗ್ಯ ಸ್ವರ
7. ಚಟುವಟಿಕೆಯುಳ್ಳವರಾಗಿರ್ರಿ!
8. ನೀತಿವಂತನ ಆಶೀರ್ವಾದಗಳು
9. ಮಹಿಳೆಯರ ಸ್ವರ 'ರೂತಳು'
10. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುವಿನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕರಿಗೆ ನನ್ನ ಹೃದಯ ಪೂರ್ವಕ ವಂದನೆಗಳು.

ಇಲ್ಲಿಯವರೆಗೆ ತಾವೆಲ್ಲರೂ ನಮ್ಮ ಸೇವೆಗೆ ಕೊಡುತ್ತಿರುವ ಪ್ರೋತ್ಸಾಹಗಳಿಗೂ, ಮಾಡುತ್ತಿರುವ ಪ್ರಾರ್ಥನೆಗಳಿಗೂ ನಿಮಗೆಲ್ಲರಿಗೂ ವಂದನೆಗಳು. ಅನೇಕ ಸಮಯಗಳಲ್ಲಿ ಫೋನ್ ಕರೆಗಳ ಮೂಲಕವಾಗಿಯೂ, ಪತ್ರಗಳ ಮೂಲಕವಾಗಿಯೂ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸುತ್ತಿರುವುದರಿಂದ ತುಂಬಾ ಸಂತೋಷಪಡುತ್ತೇವೆ. ಇದೇ ರೀತಿಯಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಪ್ರಾರ್ಥನೆಗಳು ತುಂಬಾ ಅವಶ್ಯಕವಾಗಿ ಬೇಕಾಗಿದೆ. ದೇವರ ಸ್ವರ ಮಾಸ ಪತ್ರಿಕೆಗಾಗಿ ಕರ್ತನಾದ ಯೇಸುಕ್ರಿಸ್ತನನ್ನು ನಾನು ಕೊಂಡಾಡುತ್ತೇನೆ ಕಾರಣ ಈ ಪತ್ರಿಕೆಯ ಮೂಲಕ ಕರ್ತನು ಸಾವಿರಾರು ಜನರ ಆತ್ಮೀಕ ಜೀವಿತವನ್ನು ಕಟ್ಟುತ್ತಾ ಇದ್ದಾನೆ. ಇದನ್ನು ಓದುವಂತಹ ಅನೇಕ ಜನರು ಆತ್ಮೀಕವಾಗಿ ಬೆಳೆಯುತ್ತಾ ಇದ್ದಾರೆ. ಸಮಾಧಾನ ಇಲ್ಲದವರು ಸಮಾಧಾನ ಹೊಂದುತ್ತಾರೆ, ರಕ್ಷಣೆ ಇಲ್ಲದವರು ರಕ್ಷಣೆ ಹೊಂದುತ್ತಾರೆ ಮತ್ತು ಅನೇಕರು ಕರ್ತನಾದ ಯೇಸುಕ್ರಿಸ್ತನ ರಹಸ್ಯ ಬರೋಣಕ್ಕೆ ಸಿದ್ಧವಾಗುತ್ತಿದ್ದಾರೆ. ಇದನ್ನು ನೋಡುವಾಗ, ಕೇಳುವಾಗ ನಾವು ಕರ್ತನಲ್ಲಿ ಸಂತೋಷಪಡುತ್ತೇವೆ. ಫಿಲಿ. 4:4 ಹೇಳುತ್ತದೆ, 'ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ; ಸಂತೋಷಪಡಿರಿ ಎಂಬುದಾಗಿ'. 'ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು' (ಫಿಲಿ. 4:7). ಪ್ರಿಯ ವಾಚಕ ಸಹೋದರ/ಸಹೋದರಿಯರೇ ತಮ್ಮ ಯಾವುದೇ ಆದಂತಹ ಸಲಹೆಗಳು, ಸೂಚನೆಗಳು ಇರುವುದಾದರೆ ನಮಗೆ ಮುಖತ ಭೇಟಿ ನೀಡಿ, ಪತ್ರದ ಮೂಲಕ ಹಾಗೂ ಫೋನ್ ಕರೆಯ ಮೂಲಕ ತಿಳಿಸಬಹುದು. ಅದನ್ನು ಸ್ವೀಕರಿಸಲು ನಾವು ಸಂತೋಷಪಡುತ್ತೇವೆ ಎಂದು ಹೇಳುತ್ತಾ ನನ್ನೆರಡು ಮಾತುಗಳನ್ನು ಕೊನೆಗೊಳಿಸುತ್ತೇನೆ.

ಇದೇ ದಿವಸ ಮೊದಲುಗೊಂಡು ನಿಮ್ಮನ್ನು ಆಶೀರ್ವದಿಸುವೆನು (ಹಗ್ಗಾ. 2:19).

ಕರ್ತನಾದ ಯೇಸುಕ್ರಿಸ್ತನು ನಿಮ್ಮನ್ನು ಆಶೀರ್ವದಿಸಲಿ, ಅಭಿವೃದ್ಧಿಪಡಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) **"ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು".** (ಪ್ರಕ. 20:12).

5) **"ಆಗ ಮೋಶೆ ಯೆಹೋವನ ಬಳಿಗೆ ತಿರುಗಿ ಹೋಗಿ ಅಯ್ಯೋ ಅಯ್ಯೋ, ಈ ಜನರು ಮಹಾ ಪಾಪವನ್ನು ಮಾಡಿದ್ದಾರೆ; ಚಿನ್ನದ ದೇವರನ್ನು ಮಾಡಿಕೊಂಡಿದ್ದಾರೆ. ಆದರೂ ನೀನು ಕರುಣವಿಟ್ಟು ಅವರ ಪಾಪವನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ ಎಂದು ಪ್ರಾರ್ಥಿಸಿದನು"** (ವಿಮೋ. 32:31–32).

6) **"ಜೀವಿತರ ಪಟ್ಟಿಯಿಂದ ಅವರ ಹೆಸರು ತೆಗೆಯಲ್ಪಡಲಿ; ಸದ್ಭಕ್ತರ ಹೆಸರಿನ ಸಂಗಡ ಅವರದು ಬರೆಯಲ್ಪಡದಿರಲಿ"** (ಕೀರ್ತ. 69:28).

7) **"ನಿನ್ನ ಜನ ಪಕ್ಷವನ್ನು ಹಿಡಿದಿರುವ ಮಹಾಪಾಲಕನಾದ ಮೀಕಾಯೇಲನು ಆ ಕಾಲದಲ್ಲಿ ಏಳುವನು; ಮೊಟ್ಟ ಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸಿದಂಥ ಸಂಕಟವು ಸಂಭವಿಸುವುದು; ಆಗ ಆ ನಿನ್ನ ಜನರೊಳಗೆ ಯಾರ ಹೆಸರುಗಳು ಜೀವಭಾಧ್ಯರ ಪಟ್ಟಿಯಲ್ಲಿ ಸಿಕ್ಕುವವೋ ಅವರೆಲ್ಲರೂ ರಕ್ಷಿಸಲ್ಪಡುವರು"** (ದಾನಿ. 12:1).

**ಜೀವಬಾಧ್ಯರ ಪುಸ್ತಕ :–** ಜೀವಬಾಧ್ಯರ ಪುಸ್ತಕ ಅಂದರೆ ಯಾರೆಲ್ಲಾ ನಿತ್ಯಜೀವಕ್ಕೆ ಬಾಧ್ಯರಾಗಿದ್ದಾರೆ. ಅವರೆಲ್ಲರ ಹೆಸರುಗಳು ಬರೆಯುವ ಪುಸ್ತಕವಾಗಿದೆ. ಯಾವ ವ್ಯಕ್ತಿಗಳ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿರುವುದೋ ಅವರು ಮಾತ್ರ ಪರಲೋಕ ರಾಜ್ಯಕ್ಕೆ ಸೇರುವರು ಹಾಗೂ ನಿತ್ಯ ಜೀವಕ್ಕೆ ಬಾಧ್ಯರಾಗುವರು.

**ಯಾರ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಡುತ್ತದೆ :** ಯಾರೆಲ್ಲಾ ಪಾಪಕ್ಕೆ ಪಶ್ಚಾತ್ತಾಪಪಟ್ಟು ಕರ್ತನಾದ ಯೇಸುಕ್ರಿಸ್ತನು ತನಗಾಗಿ ಕ್ರೂಜೆಯಲ್ಲಿ ಸತ್ತು ಹೂಣಲ್ಪಟ್ಟು ಮೂರನೆಯ ದಿನದಲ್ಲಿ ಮರಣದಿಂದ ಎದ್ದು ಬಂದನೆಂದು ಹೃದಯದಲ್ಲಿ ನಂಬಿ ಬಾಯಲ್ಲಿ ಅರಿಕೆಮಾಡಿ ಕರ್ತನಾದ ಯೇಸುಕ್ರಿಸ್ತನನ್ನು ತನ್ನ ಜೀವಿತದ ರಕ್ಷಕನೂ ಒಡೆಯನಾಗಿ ಅಂಗೀಕರಿಸುತ್ತಾರೋ ಅವರ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಡುತ್ತದೆ (ಫಿಲಿ. 4:2–3, ಪ್ರಕ. 20:12, ಲೂಕ. 10:20).

ಜೀವ ಬಾಧ್ಯರ ಪುಸ್ತಕದಲ್ಲಿ ಯಾರ ಹೆಸರುಗಳು ಬರೆಯಲ್ಪಟ್ಟಿರುತ್ತವೋ ಅವರ ಹೆಸರು ಒಂದು ಸಲ ಬರೆದ ನಂತರ ಅಳಿಸಲ್ಪಡಲು ಸಾಧ್ಯವೋ :–

ಇಂದು ಕೆಲವು ದುರ್ಬೋಧನೆಗಳು ಚಾಲ್ತಿಯಲ್ಲಿವೆ. ಏನೆಂದರೆ ಒಂದು ಸಲ ರಕ್ಷಣೆ ಹೊಂದಿದ ನಂತರ ಹೇಗೆ ಬೇಕಾದರೂ ಪಾಪದಲ್ಲಿ ಜೀವಿಸಬಹುದು ಅಂಥವರು ರಕ್ಷಣೆ ಹೊಂದುತ್ತಾರೆ ಮತ್ತು ಜೀವಬಾಧ್ಯರ ಪಟ್ಟಿ ಎಂಬ ಪುಸ್ತಕದಿಂದ ಅವರ ಹೆಸರುಗಳು ಅಳಿಸಲ್ಪಡುವುದಿಲ್ಲ ಎಂಬ ದುರುಪದೇಶ ಲೋಕದಲ್ಲಿ ಅನೇಕ ಕಡೆ ಹರಡಿದೆ.

ಪ್ರಕಟನೆ ಪುಸ್ತಕದ 2 ಮತ್ತು 3ನೇ ಅಧ್ಯಾಯಗಳನ್ನು ಸರಿಯಾಗಿ ಓದಿ ಧ್ಯಾನಿಸುವುದಾದರೆ ಜಯ ಹೊಂದುವವನಿಗೆ ಸಿಗುವಂಥಹ ಆಶೀರ್ವಾದಗಳ ಕುರಿತಾಗಿ ಬರೆಯಲ್ಪಟ್ಟಿದೆ.

ಕ್ರೈಸ್ತ ವಿಶ್ವಾಸಿಯಾದವನು ಪಾಪದಲ್ಲಿ ಬೀಳಲು ಸಾಧ್ಯವಿದೆ, ಪಾಪದಲ್ಲಿ ಜೀವಿಸಲು ಸಾಧ್ಯವಿಲ್ಲ. ಒಬ್ಬ ಕ್ರೈಸ್ತ ವಿಶ್ವಾಸಿಯಾದವನು ಜಯದ ಜೀವಿತವನ್ನು ಜೀವಿಸಲು ಕರೆಯಲ್ಪಟ್ಟಿದ್ದಾನೆ. ಅದಕ್ಕಾಗಿ ಅವನಿಗೆ ಪವಿತ್ರಾತ್ಮ, ಪವಿತ್ರಾತ್ಮನ ಅಭಿಷೇಕ, ದೇವರ ವಾಕ್ಯ, ಉಪದೇಶ, ಸಹೋದರರ ಅನ್ಯೋನ್ಯತೆ ಕೊಡಲ್ಪಟ್ಟಿದೆ. 1 ಕೊರಿ. 15:57 ಹೇಳುತ್ತದೆ, ಆದರೆ ದೇವರು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ ಆತನಿಗೆ ಸ್ತೋತ್ರ.

"ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣ ಮಾಡುವುದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು. ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ"(ಇಬ್ರಿ. 2:17–18).

ಕರ್ತನಾದ ಯೇಸುಕ್ರಿಸ್ತನಿಗೂ ಒಬ್ಬ ಸಾಧಾರಣ ಮನುಷ್ಯನಿಗೆ ಇರುವಂತಹ ಅನೇಕ ಶೋಧನೆಗಳು ಬಂದವು ಆತನು ಶೋಧನೆಯಲ್ಲಿ ಬಿದ್ದು ಪಾಪ ಮಾತ್ರ ಮಾಡಲಿಲ್ಲ,

ಯೆಹೋವನೇ, ನೀನು ಭೂಲೋಕದ ಸರ್ವಾಧಿಕಾರಿ;
ಎಲ್ಲಾ ದೇವರುಗಳಲ್ಲ ಮಹೋನ್ನತನು ನೀನೇ (ಕೀರ್ತ. 97:9).

ನಮಗೆ ಶೋಧನೆಗಳು ಬರುವಾಗ ಅದರಲ್ಲಿ ಬೀಳದೆ ಅವುಗಳನ್ನು ಜಯಿಸುವುದೇ ಕ್ರಿಸ್ತೀಯ ಜೀವಿತವಾಗಿದೆ.

"ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ. ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ"(ಇಬ್ರಿ. 4:15–16).

ಇಲ್ಲಿ ಕೂಡ ಕರ್ತನಾದ ಯೇಸುಕ್ರಿಸ್ತನಿಗೆ ಶೋಧನೆ ಬಂದಾಗಲೂ ಪಾಪ ಮಾಡಲಿಲ್ಲ ಎಂದು ತಿಳಿಸುತ್ತದೆ.

ಸತ್ಯವೇದದಲ್ಲಿ ಅನೇಕ ಕಡೆ ಜಯದ ಜೀವಿತದ ಕುರಿತಾಗಿಯೂ ನಂಬಿಕೆಯಲ್ಲಿ ಸ್ಥಿರವಾಗಿ ನಿಲ್ಲುವುದರ ಕುರಿತಾಗಿಯೂ ಬರೆಯಲ್ಪಟ್ಟಿದೆ.

1) ಆದರೆ ಕಡೆವರೆಗೂ ತಾಳುವವನು ರಕ್ಷಣೆ ಹೊಂದುವನು (ಮತ್ತಾ. 24:13).

2) "ನಿಮ್ಮ ವಿಷಯದಲ್ಲಿ ಜಾಗರೂಕರಾಗಿರಿ. ಅತಿ ಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯಗಳು ಭಾರವಾಗಿರಲಾಗಿ ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೆ ಬಂದೀತು. ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಬರುವುದು. ಆದರೆ ಬರುವದಕ್ಕಿರುವ ಇವೆಲ್ಲವುಗಳೊಳಗಿನಿಂದ (ಕ್ರೈಸ್ತ ವಿಶ್ವಾಸಿಗಳು) ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತು ಕೊಳ್ಳುವದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರಿ ಅಂದನು" (ಲೂಕ. 21:34–36).

3) "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು ಎಂದು ಹೇಳಿದನು" (ಮತ್ತಾ. 26:41).

4) "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರ್ರಿ ಎಂದು ಅವರನ್ನು ಧೈರ್ಯಗೊಳಿಸಿದರು" (ಅ.ಕೃ. 14:22).

5) "ಸಹೋದರರೇ, ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ; ನೀವು ಅದನ್ನು ಸ್ವೀಕರಿಸಿದಿರಿ, ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಗಟ್ಟಿಯಾಗಿ ಹಿಡುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರಾಧಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ" (1 ಕೊರಿ. 15:1–2).

6) "ಹೀಗಿರಲಾಗಿ ಪ್ರಿಯರೂ ಇಷ್ಟರೂ ಆದ ನನ್ನ ಸಹೋದರರೇ, ನನಗೆ ಸಂತೋಷವೂ ಜಯಮಾಲೆಯೂ ಆಗಿರುವವರೇ, ನಾನು ಹೇಳಿದಂತೆ ಕರ್ತನಲ್ಲಿ ದೃಢವಾಗಿ ನಿಲ್ಲಿರಿ; ಪ್ರಿಯರೇ" (ಫಿಲಿ. 4:1).

7) "ಹೀಗಿರುವಲ್ಲಿ ನನ್ನ ಪ್ರಿಯರೇ, ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆ ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ ನಾನಿಲ್ಲದಿರುವಾಗಲೂ ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ" (ಫಿಲಿ. 2:12).

8) "ನೀವು ಕೇಳಿದಂಥ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವದು" (ಕೊಲೊ. 1:23).

9) "ನೀವು ಕರ್ತನಲ್ಲಿ ದೃಢವಾಗಿ ನಿಂತಿದ್ದರೆ ನಮಗೆ ಜೀವಕಳೆ" (1 ಥೆಸ. 1:8).

10) "ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು ಭ್ರಷ್ಟರಾದರೆ ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ; ಯಾಕಂದರೆ ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನ: ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ. ಭೂಮಿಯು ತನ್ನ ಮೇಲೆ ಅನೇಕಾವರ್ತಿ ಸುರಿಯುವ ಮಳೆಯನ್ನು ಹೀರಿಕೊಂಡು ಅದು ಯಾರ ನಿಮಿತ್ತವಾಗಿ ವ್ಯವಸಾಯ ಮಾಡಲ್ಪಡುತ್ತದೋ ಅವರಿಗೆ ಅನುಕೂಲವಾದ ಬೆಳೆಯನ್ನು ಕೊಟ್ಟರೆ ದೇವರ ಆಶೀರ್ವಾದವನ್ನು ಹೊಂದುತ್ತದೆ; ಆದರೆ ಅದು ಮುಳ್ಳುಗಿಡಗಳನ್ನೂ ಕಳೆಗಳನ್ನೂ ಬೆಳಸಿದರೆ

ಅಯೋಗ್ಯವೆನಿಸಿಕೊಂಡು ಶಾಪಕ್ಕೆ ಗುರಿಯಾಗುತ್ತದೆ, ಅದರ ಅಂತ್ಯವು ಸುಡಲ್ಪಡುವದೇ" (ಇಬ್ರಿ. 6:4–8).

11) "ಯಾಕಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿದರೆ ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ; ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪೂ ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು. ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೆ" (ಇಬ್ರಿ. 10:26–29).

12) "ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ" (ಇಬ್ರಿ. 10:25).

13) "ಬರುವಾತನು ಇನ್ನು ಸ್ವಲ್ಪಕಾಲದಲ್ಲಿ ಬರುವನು, ತಡಮಾಡುವದಿಲ್ಲ; ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು; ಅವನು ಹಿಂದೆಗೆದರೆ ಅವನಲ್ಲಿ ನನಗೆ ಸಂತೋಷವಿರುವದಿಲ್ಲ ಎಂದು ಬರೆದದೆ. ನಾವಾದರೋ ಹಿಂದೆಗೆದವರಾಗಿ ನಾಶವಾಗುವವರಲ್ಲ, ನಂಬುವವರಾಗಿ ಪ್ರಾಣರಕ್ಷಣೆಯನ್ನು ಹೊಂದುವವರಾಗಿದ್ದೇವೆ" (ಇಬ್ರಿ. 10:37–39).

14) "ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ? ಅಂದನು" (ಲೂಕ. 18:8).

15) "ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ; ಯಾಕಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿ. 12:28–29).

16) "ಸಹೋದರ ಸ್ನೇಹವು ನೆಲೆಯಾಗಿರಲಿ" (ಇಬ್ರಿ. 13:1).

17) "ನಿಮ್ಮಲ್ಲಿ ಒಬ್ಬನು ಸತ್ಯಮಾರ್ಗವನ್ನು ತಪ್ಪಿಹೋಗಿರಲಾಗಿ ಮತ್ತೊಬ್ಬನು ಅವನನ್ನು ಸನ್ಮಾರ್ಗಕ್ಕೆ ತಂದರೆ ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಬಹುಪಾಪಗಳನ್ನು ಮುಚ್ಚಿದವನಾದನೆಂದು ತಿಳಿದುಕೊಳ್ಳಿರಿ" (ಯಾಕೋ. 5:19–20).

18) "ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು; ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು; ಸ್ವಾಮಿಯು ತನ್ನನ್ನು ಪ್ರೀತಿಸುವವರಿಗೆ ಇದನ್ನು ವಾಗ್ದಾನಮಾಡಿದ್ದಾನೆ" (ಯಾಕೋ. 1:12).

19) "ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸುಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ. ನೀವು ಮುಂಚೆ ಅಜ್ಞಾನಿಗಳಾಗಿದ್ದಾಗ ನಿಮಗಿದ್ದ ದುರಾಶೆಗಳನ್ನು ಅನುಸರಿಸಿ ನಡೆಯುವವರಾಗಿರದೆ ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು ಎಂದು ಬರೆದದೆಯಲ್ಲಾ" (1 ಪೇತ್ರ. 1:13–16).

20) "ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ. ಆದರೆ ನೀವು ಎಷ್ಟರ ಮಟ್ಟಿಗೂ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರ ಮಟ್ಟಿಗೆ ಸಂತೋಷವುಳ್ಳವರಾಗಿರ್ರಿ; ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿಯೂ ನೀವು ಸಂತೋಷಪಟ್ಟು ಉಲ್ಲಾಸಗೊಳ್ಳುವಿರಿ. ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ. ನಿಮ್ಮಲ್ಲಿ ಯಾವನಾದರೂ ಕೊಲೆಗಾರನು ಕಳ್ಳನು ದುಷ್ಟನು ಪರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು. ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1 ಪೇತ್ರ. 4:12–16).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಆತನ ಮಿಂಚುಗಳು ಲೋಕವನ್ನು ಬೆಳಗಿಸಿದವು;
ಭೂಮಿಯು ಅದನ್ನು ಕಂಡು ನಡುಗಿತು (ಕೀರ್ತ. 97:4).

## ಡಿಜಿಎಮ್ ಬೇತೇಲ್ ಅಂಕಣ

- ಮೇ 27ರಿಂದ 29ರವರೆಗೆ ಬಿಡುಗಡೆ ಮತ್ತು ಸ್ವಸ್ಥತೆಯ ಕೂಟವನ್ನು ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ಏರ್ಪಡಿಸಲಾಗಿದೆ.
- ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲಮಾಧ್ಯಮ ಸ್ಕೂಲ್‌ನ ನೊಂದಾವಣೆಯು ಪ್ರಾರಂಭವಾಗಿದೆ. ಎಲ್‌ಕೆಜಿ, ಯುಕೆಜಿ ಮಕ್ಕಳ ಹೆಸರನ್ನು ನೊಂದಾಯಿಸುವವರು ಡಿಜಿಎಮ್ ಕಛೇರಿಗೆ ಬಂದು ಹೆಸರನ್ನು ನೊಂದಾಯಿಸಬಹುದು.
- ಮಾರ್ಚ್ ತಿಂಗಳಲ್ಲಿ ನಡೆಸಲ್ಪಟ್ಟ ಮೂರು ದಿನದ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಸಲ್ಪಟ್ಟಿತು.

### ಪ್ರಾರ್ಥನಾ ಮನವಿಗಳು

- ಕರ್ನಾಟಕದ ಉಜ್ಜೀವನಕ್ಕಾಗಿ, ರಕ್ಷಣೆಗಾಗಿ, ಮತ್ತು ಪ್ರತಿಯೊಂದು ಸೇವಕರುಗಳಿಗಾಗಿ, ಸೇವೆಗಳಿಗಾಗಿ ಪ್ರಾರ್ಥಿಸೋಣ.
- ಪ್ರತಿ ನಿತ್ಯವೂ ನಮ್ಮ ರಾಜ್ಯದ 30 ಜಿಲ್ಲೆಗಳ ಹೆಸರನ್ನು ಹೇಳಿ ಆತ್ಮಭಾರದೊಂದಿಗೆ ಪ್ರಾರ್ಥಿಸೋಣ. ಕರ್ನಾಟಕದ ಮೇಲೆ ಕರ್ತನ ಆಶೀರ್ವಾದವನ್ನು ಕೇಳಿಕೊಳ್ಳೋಣ.
- 1 ತಿಮೊ. 2:1–4ರಲ್ಲಿ ಕರ್ತನು ತಿಳಿಸಿರುವಂತೆ ಅರಸರುಗಳಿಗಾಗಿ ಮತ್ತು ಅಧಿಕಾರಿಗಳಿಗಾಗಿ ನಾವು ಭಾರದಿಂದ, ಕಣ್ಣೀರಿನಿಂದ ಪ್ರಾರ್ಥಿಸೋಣ.
- ಕರ್ತನು ತಕ್ಕ ಸಮಯದಲ್ಲಿ ಮಳೆಯನ್ನು ಸುರಿಸಲು ಪ್ರಾರ್ಥಿಸೋಣ.
- ಭಾರತ ದೇಶದ ರಕ್ಷಣೆಗಾಗಿ, ಕರ್ತನ ಕೃಪೆಯನ್ನು ದೇಶದ ಮೇಲೆ ಕೇಳಿಕೊಳ್ಳೋಣ.
- ಅಪ್ರಾಪ್ತ ಮಕ್ಕಳ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳು ನಿಂತು ಹೋಗುವುದಕ್ಕಾಗಿ, ರಕ್ಷಣೆಗಾಗಿ ಪ್ರಾರ್ಥಿಸೋಣ.
- ವಿಶ್ವಾಸದಮನೆಯ ಪ್ರತಿಯೊಂದು ಸೇವೆಗಳಿಗಾಗಿ, ಅವಶ್ಯಕತೆಗಳಿಗಾಗಿ ಪ್ರಾರ್ಥಿಸಿರಿ.
- ದೇವರ ಸ್ವರ ಮಾಸ ಪತ್ರಿಕೆ ಸೇವೆಯು ಪ್ರತಿ ತಿಂಗಳು ಉತ್ತಮವಾಗಿ ಮುದ್ರಿತವಾಗಲು ಪ್ರಾರ್ಥಿಸೋಣ.

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಸಾರ್ವಭೌಮನಾದ ಯೆಹೋವನ ಎದುರಿನಲ್ಲಿ ಪರ್ವತಗಳು
ಮೇಣದಂತೆ ಕರಗಿಹೋದವು (ಕೀರ್ತ. 97:5).




**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲಮಾಧ್ಯಮ ಸ್ಕೂಲ್‌ನ ನೊಂದಾವಣೆಯು ಪ್ರಾರಂಭವಾಗಿದೆ. ಎಲ್‌ಕೆಜಿ, ಯುಕೆಜಿ ಮಕ್ಕಳ ಹೆಸರನ್ನು ನೊಂದಾಯಿಸುವವರು ಈ ಕೆಳಗಿನ ಶಾಲೆಯ ಕಛೇರಿಗೆ ಬಂದು ಹೆಸರನ್ನು ನೊಂದಾಯಿಸಿರಿ.**

ಕಛೇರಿಯ ವಿಳಾಸ :

**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಸ್ಕೂಲ್,**
ಯೇಸುಪುರ, ಶಂಕರಪುರ ಪೋಸ್ಟ್, ಇನ್ನಂಜೆ ಗ್ರಾಮ,
ಉಡುಪಿ–574115.



# ಸ್ಥಳೀಯ ಮತ್ತು ವಿದೇಶ ಸುದ್ಧಿ

- 10 ಪಾಕ್ ಉಗ್ರರ ಪೈಕಿ ಮೂವರ ಹತ್ಯೆ :– ಶಿವರಾತ್ರಿ ಹಬ್ಬದಂದು ದೇಶದ ಪುಣ್ಯ ಕ್ಷೇತ್ರಗಳಲ್ಲಿ ವಿಧ್ವಂಸಕ ಕೃತ್ಯ ನಡೆಸುವ ಉದ್ದೇಶದಿಂದ ಪಾಕಿಸ್ತಾನದಿಂದ ಗಡಿ ನುಸುಳಿ ಬಂದಿದ್ದ 10 ಮಂದಿ ಉಗ್ರರ ಹಡಗು ತಾಣವನ್ನು ಪತ್ತೆ ಹಚ್ಚಲಾಗಿದ್ದು, ಇದುವರೆಗೆ ಮೂವರು ಉಗ್ರರನ್ನು ಕೊಲ್ಲಲಾಗಿದೆ.

- ಸಾಲದ ಸುಳಿಗೆ ಸಿಲುಕಿ, ಲಂಡನ್‌ಗೆ 'ಪರಾರಿ'ಯಾಗಿರುವ ಉದ್ಯಮಿ ವಿಜಯ್ ಮಲ್ಯಗೆ ಸಮಸ್ಯೆಗಳ ಮೇಲೊಂದು ಸಮಸ್ಯೆಗಳು ಎದುರಾಗುತ್ತಿವೆ. ಮಲ್ಯ ಅವರು ತಮ್ಮ ವಿರುದ್ಧ ದಾಖಲಾಗಿರುವ 50 ಲಕ್ಷ ರೂ. ಮೊತ್ತದ ಚೆಕ್‌ಬೌನ್ಸ್ ಪ್ರಕರಣದ ವಿಚಾರಣೆಗೆ ಹಾಜರಾಗಲು ವಿಫಲರಾದ ಕಾರಣಕ್ಕೆ ಹೈದರಾಬಾದ್‌ನ 14ನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾಮೀನುರಹಿತ ಬಂಧನ ವಾರಂಟ್ ಹೊರಡಿಸಿದೆ.

- ಸಿರಿಯಾದಿಂದ ರಷ್ಯಾ ಯುದ್ಧ ವಿಮಾನಗಳು ವಾಪಸ್: ಅಚ್ಚರಿಯ ಬೆಳವಣಿಗೆಯೊಂದರಲ್ಲಿ ರಷ್ಯಾದ ಕೆಲ ಯುದ್ಧ ವಿಮಾನಗಳು ಸಿರಿಯಾದಿಂದ ಸ್ವದೇಶಕ್ಕೆ ವಾಪಸ್ಸಾಗಿವೆ. ಇನ್ನಾದರೂ ಡಮಸ್ಕಸ್‌ನ ದೌಲತ್ತಿನ ಆಡಳಿತಕ್ಕೆ ಒತ್ತಡ ಹೇರಿ ಶಾಂತಿ ಮಾತುಕತೆ ಸಾಧ್ಯವಾಗಬಹುದು ಎಂದು ರಾಜ ತಾಂತ್ರಿಕರು ಭರವಸೆ ವ್ಯಕ್ತಪಡಿಸಿದ್ದಾರೆ.

- ಕುಷ್ಠರೋಗಿಗಳ ಬಾಳಿಗೆ ಬೆಳಕಾಗಿದ್ದ ಮದರ್ ತೆರೇಸಾ ಅವರಿಗೆ ಸಂತ ಪದವಿ ನೀಡಲು ಪೋಪ್ ಫ್ರಾನ್ಸಿಸ್ ಅವರು ಔಪಚಾರಿಕ ಒಪ್ಪಿಗೆ ನೀಡಿದ್ದು, ಸಂತ ಪದವಿ ಘೋಷಣೆಗೆ ದಿನಾಂಕ ನಿಗದಿಪಡಿಸಿದ್ದಾರೆ. ಭಾರತದಲ್ಲಿ ಬಡವರ ಉದ್ಧಾರಕ್ಕಾಗಿ ಸಂಪೂರ್ಣ ಜೀವನವನ್ನೇ ಮುಡಿಪಾಗಿಟ್ಟಿದ್ದ ಮದರ್ ತೆರೇಸಾ ಅವರು ಮೃತಪಟ್ಟು 19 ವರ್ಷಗಳ ತರುವಾಯ, ಅವರ ಉದಾತ್ತ ಸೇವೆ ಪರಿಗಣಿಸಿ ಸಂತ ಪದವಿ ನೀಡುವ ನಿರ್ಧಾರಕ್ಕೆ ಬರಲಾಗಿದೆ.

- ಕೃಷಿಯಿಂದ ಗಳಿಸುವ ಆದಾಯಕ್ಕೆ ಇರುವ ತೆರಿಗೆ ವಿನಾಯಿತಿಯನ್ನು ಹಲವಾರು ವ್ಯಕ್ತಿಗಳು ದುರ್ಬಳಕೆ ಮಾಡಿಕೊಳ್ಳುತ್ತಿರುವ ದಟ್ಟ ಅನುಮಾನ ಈಗ ವ್ಯಕ್ತವಾಗಿದೆ.

- ಪಾಕಿಸ್ತಾನ ಬದಿಯ ಗಡಿ ನಿಯಂತ್ರಣ ರೇಖೆ ಸಮೀಪ ಚೀನ ಸೇನಾ ಪಡೆಗಳು ಪ್ರತ್ಯಕ್ಷವಾಗಿರುವುದು ಭಾರತದ ಆತಂಕಕ್ಕೆ ಕಾರಣವಾಗಿದೆ.

- ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಸೇರಿದಂತೆ ಥರ್ಮೋಕೋಲ್‌ನಿಂದ ತಯಾರಿಸಿದ ವಸ್ತುಗಳ ಬಳಕೆಗೆ ನಿಷೇಧ ಹೇರುವ ಕಾಯಿದೆ ರಾಜ್ಯಾದ್ಯಂತ ಜಾರಿಯಾಗಿದೆ.

- ಜನರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುವ ಸುಮಾರು 500 ಹಾನಿಕಾರಕ ಔಷಧ ನಿಷೇಧಿಸುವ ಕುರಿತು ಆರೋಗ್ಯ ಸಚಿವಾಲಯ ಚಿಂತನೆ ನಡೆಸಿದೆ.

ದೇಶದಲ್ಲಿರುವ ನಂಬಿಗಸ್ತರನ್ನು ಆರಿಸಿಕೊಳ್ಳುವೆನು; ಅವರೇ ನನ್ನ ಸನ್ನಿಧಿಯಲ್ಲಿ ವಾಸಿಸಬೇಕು (ಕೀರ್ತ. 101:6).

# ಬಿಡುಗಡೆಯ ಕುಟುಂಬ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಜ್ಞಾನವಂತೆಯು ತನ್ನ ಮನೆಯನ್ನು ಕಟ್ಟಿಕೊಳ್ಳುವಳು. ಜ್ಞಾನಹೀನಳು ಅದನ್ನು ಸ್ವಂತ ಕೈಯಿಂದ ಮುರಿದು ಬಿಡುವಳು"** (ಜ್ಞಾನೋ. 14:1). ಪ್ರಿಯ ದೇವ ಮಗುವೆ, ಮನೆಯನ್ನು ಬಹಳ ಪ್ರಯಾಸದಿಂದ ಸಾಲ ಮಾಡಿ ಹೇಗಾದ್ರೂ ಕಟ್ಟಿಕೊಳ್ಳಬಹುದು ಆದರೆ ಕುಟುಂಬ ಕಟ್ಟಲು ಅಷ್ಟು ಸುಲಭವಿಲ್ಲ, ಹಣದಿಂದ, ಜನ ಬಲದಿಂದ ಮನೆ ಕಟ್ಟಬಹುದು. ಆದರೆ ಕುಟುಂಬ ಕಟ್ಟಲು ದೇವ ಬಲಬೇಕೆ ಬೇಕು. ಈ ದಿನ ಮಾನಗಳಲ್ಲಿ ದಿನ ಪತ್ರಿಕೆಯಲ್ಲಿ ನಾವು ಓದುತ್ತೇವೆ ಹಾಗೂ ಟಿವಿಯಲ್ಲಿ ನೋಡುತ್ತೇವೆ ಎಷ್ಟೋ ಕುಟುಂಬಗಳು ಒಡೆದು ಚೂರು ಚೂರಾಗಿ ಹೋಗಿರುವುದನ್ನು ನಾವು ಕಾಣುತ್ತೇವೆ. ಕ್ರಿಸ್ತೀಯ ಕುಟುಂಬಗಳು ಆ ರೀತಿ ಒಡೆದು ಹೋಗದೆ ಮಾದರಿಯಾಗಿ ಜೀವಿಸಬೇಕಾದರೆ ಕುಟುಂಬದಲ್ಲಿ ಸ್ತ್ರೀಯ ಪಾತ್ರ, ಪುರುಷನ ಪಾತ್ರ, ಮಕ್ಕಳ ಪಾತ್ರ ಮುಖ್ಯವಾಗಿರುತ್ತದೆ.

**ವಯಸ್ಕರ ಸ್ವರ**

1) **ಸ್ತ್ರೀಯ ಪಾತ್ರ :–** ಕರ್ತನಲ್ಲಿ ಭಯಭಕ್ತಿಯುಳ್ಳವರಾಗಿರಬೇಕು. "ಸೌಂದರ್ಯ ನೆಚ್ಚತಕ್ಕದ್ದಲ್ಲ, ಲಾವಣ್ಯವು ನೆಲೆಯಲ್ಲ; ಯೆಹೋವನಲ್ಲಿ ಭಯಭಕ್ತಿಯುಳ್ಳವಳೇ ಸ್ತೋತ್ರ ಪಾತ್ರಳು" (ಜ್ಞಾನೋ. 31:30). ಕುಟುಂಬದಲ್ಲಿ ಸ್ತ್ರೀಯಾದವಳು ಭಯಭಕ್ತಿಯುಳ್ಳವಳಾಗಿರುವಲ್ಲಿ ಕುಟುಂಬವು ಆತ್ಮೀಕ ಕುಟುಂಬವಾಗಿ ಮುಂದುವರೆಯುವುದು ನಿಶ್ಚಯ. ಆಕೆ ಎಲ್ಲಕ್ಕಿಂತಲೂ ಹೆಚ್ಚಾಗಿ ಕ್ರಿಸ್ತನನ್ನು ಪ್ರೀತಿಸುವವಳಾಗಿರಬೇಕಾಗಿದೆ. (ಲೂಕ. 14:28). ದೇವ ಭಕ್ತೆಯರಿಗೆ ಯೋಗ್ಯವಾದ ನಡತೆಯುಳ್ಳವರು ಸದ್ಬೋಧನೆ ಹೇಳುವವರು ಆಗಿರಬೇಕಾಗಿದೆ (ತೀತ. 2:3). ಕೆಲವು ವೇಳೆ ಗಂಡದಿರು ದೇವರ ವಾಕ್ಯಕ್ಕೆ ಅವಿಧೇಯರಾಗಿದ್ದರೂ ಸ್ತ್ರೀಯು ನಿರ್ಮಲರಾಗಿಯೂ, ಭಯಭರಿತರಾಗಿಯೂ ನಡೆದುಕೊಳ್ಳುವುದನ್ನು ಅವರು ನೋಡಿ ವಾಕ್ಯೋಪದೇಶವಿಲ್ಲದೆ ತಮ್ಮ ಹೆಂಡತಿಯ ನಡತೆಯಿಂದಲೇ ಗಂಡಂದಿರು ರಕ್ಷಣೆಗೆ ಬರಬಹುದಾಗಿದೆ.

(1 ಪೇತ್ರ. 3:3). ಸತ್ಯವೇದವು ಸ್ತ್ರೀಗೆ ಹೊರಗಿನ ಅಲಂಕಾರಕ್ಕಿಂತಲೂ ಒಳಗಣ ಅಲಂಕಾರ ಭೂಷಣವೇ ಎಂದು ಹೇಳುತ್ತದೆ. ಶಾಂತವಾದ ಮನಸ್ಸು ಎಂಬ ಒಳಗಣ ಅಲಂಕಾರವು ಮುಖ್ಯವಾದದ್ದು, ಶಾಶ್ವತವಾದದ್ದು ಹಾಗೂ ದೇವರ ದೃಷ್ಟಿಗೆ ಮೆಚ್ಚಿಕೆಯಾದದ್ದು ಎಂದು ತಿಳಿಸುತ್ತದೆ (1 ಪೇತ್ರ. 3:5). ಕೆಲವು ಸ್ತ್ರೀಯರು ಯಾವಾಗಲೂ ಸಿಡಿಮಿಡಿ. ಅಡುಗೆ ಮನೆಯಲ್ಲಿರುವ ಪಾತ್ರೆಗಳಂತೆ ತಟಪಟ ಸದ್ದು ಮಾಡುತ್ತಾ ಕುಟುಂಬದ ಸಮಾಧಾನವನ್ನು ಹಾಳು ಮಾಡುತ್ತಾ ಇರುತ್ತಾರೆ. ತಾಳ್ಮೆಯುಳ್ಳವರಾಗಿರಬೇಕಾಗಿದೆ. ದಮೆಯುಳ್ಳವರಾಗಿದ್ದು ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ಗಂಡದಿರನ್ನು, ಮಕ್ಕಳನ್ನು ಪ್ರೀತಿಸುವವರಾಗಿರಬೇಕಾಗಿದೆ. "ಮಾತಾಳಿಗೆ ಪಾಪ ತಪ್ಪದ್ದು" (ಜ್ಞಾನೋ. 10:19). "ದೀರ್ಘಶಾಂತನು ಕೇವಲ ಬುದ್ಧಿವಂತನು" (ಜ್ಞಾನೋ. 14:29). ಅದಕ್ಕೆ ಅಪೋಸ್ತಲನಾದ ಪೌಲನು ಬರೆಯುತ್ತಾನೆ, "ಉಪದೇಶ ಮಾಡುವದಕ್ಕಾಗಲಿ, ಪುರುಷರ ಮೇಲೆ ಅಧಿಕಾರ ನಡಿಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ" (1 ತಿಮೋ. 2:12). ದೇವರು ಸ್ತ್ರೀಗೆ ಹೇಳಿದ ಮಾತೇನೆಂದು ಗೊತ್ತಾ 'ಅವನು ನಿನಗೆ ಒಡೆಯನಾಗಿರುವನು' (ಆದಿ. 3:16). ಸ್ತ್ರೀಯಾದವಳು ಕುಟುಂಬದಲ್ಲಿ ಗಂಡನಿಗೆ ಅಧೀನಳಾಗಿರಬೇಕೆಂದು ದೇವರ ವಾಕ್ಯ ತಿಳಿಸುತ್ತದೆ (1 ಪೇತ್ರ. 3:1). ಆದರೆ ಈ ದಿನಮಾನಗಳಲ್ಲಿ ಎಷ್ಟೋ ಸ್ತ್ರೀಯರು ಗಂಡನು ತನಗೆ ವಿಧೇಯನಾಗಿ ಜೀವಿಸಲಿ ಎಂದು ಬಯಸುತ್ತಾರೆ. ಆದರೆ ಈ ರೀತಿ ನಡೆದುಕೊಂಡರೆ ದೇವರ ವಾಕ್ಯಕ್ಕೆ ಒಳಗಾಗದೆ ಇರುವರು. ಆಜ್ಞೆ ಮೀರಿದವರು ಶಾಪಗ್ರಸ್ತರಾಗಿರುತ್ತಾರೆ ಅಲ್ಲವೇ (ಕೀರ್ತ. 119:21). ಸಾರಳು ಅಬ್ರಹಾಮನಿಗೆ ವಿಧೇಯಳಾಗಿ ಅವನನ್ನು ಯಜಮಾನ ಎಂದು ಕರೆದಳು ಎಂದು ಸತ್ಯವೇದ ತಿಳಿಸುತ್ತದೆ (1 ಪೇತ್ರ. 3:6). ಕುಟುಂಬದಲ್ಲಿ ಸ್ತ್ರೀಯು ತನ್ನ ಜವಾಬ್ದಾರಿಯನ್ನು ಅರಿತುಕೊಂಡರೆ ಕುಟುಂಬ ಆಶೀರ್ವಾದಿಸಲ್ಪಡುವದು ನಿಶ್ಚಯ. ಜೀವಮಾನವೆಲ್ಲಾ ತನ್ನ ಗಂಡನಿಗೆ ಅಹಿತವನ್ನು ಮಾಡದೆ ಹಿತವನ್ನೇ ಮಾಡುತ್ತಿರುವಳು (ಜ್ಞಾನೋ. 31:12).

ನೀನು ಎದ್ದು ಚೀಯೋನನ್ನು ಕರುಣಿಸುವಿ. ಅದಕ್ಕೆ ಕೃಪೆ ತೋರಿಸುವ ಸಮಯ ಇದೇ (ಕೀರ್ತ. 102:13).

ಆಕೆಯ ಕಾರ್ಯಗಳೇ ಪುರಾದ್ವಾರಗಳಲ್ಲಿ ಆಕೆಯನ್ನು ಪ್ರಶಂಶಿಸಲಿ. ಕೆಲವು ಕುಟುಂಬದಲ್ಲಿ ಹೆಂಡತಿಯೇ ಎಲ್ಲಾ ಅಧಿಕಾರ ಹೊಂದಿದವಳಾಗಿಯೂ ತಾನು ಯಾವ ಕೆಲಸ ಕಾರ್ಯ ಕೈಗೊಳ್ಳುವಾಗ ಗಂಡನಿಗೆ ತಿಳಿಸದೆಯೂ ತಾನೇ ನಿರ್ಣಯಿಸಿಕೊಂಡವಳಾಗಿರುವಳು. ದೇವ ಭಕ್ತೆಯಾದ ಸ್ತ್ರೀಯೆ ಗಂಡನು ನಿನಗೆ ಶಿರಸ್ಸಾಗಿರುವುದರಿಂದ ಮೊದಲು ಆತನಿಗೆ ಎಲ್ಲಾ ನಿರ್ಣಯಗಳು ತಿಳಿದಿರಲಿ. "ಜ್ಞಾನಹೀನಳು ಕೈಯಾರೇ ತನ್ನ ಮನೆಯನ್ನು ಮುರಿಯುವಳು" (ಜ್ಞಾನೋ. 14:1).

2) **ಪುರುಷನ ಪಾತ್ರ :–** ಪುರುಷನು ಸ್ತ್ರೀಗೆ ತಲೆಯಾಗಿದ್ದಾನೆ. ಆದರೆ ಪ್ರತಿ ಪುರುಷನು ತನ್ನ ಸ್ತ್ರೀಯನ್ನು ಪ್ರೀತಿಸುವದು ಅವನ ಕರ್ತವ್ಯವಾಗಿದೆ (ಎಫೆ. 5:23). ದು:ಖಿತಳಾದ ವೇಳೆಯಲ್ಲಿ ಸಾಂತ್ವನಗೊಳಿಸುವುದು, ಬಲಪಡಿಸುವುದು ಆತನ ಕರ್ತವ್ಯವಾಗಿದೆ (1 ಸಮು. 1:8). ಅದೇ ರೀತಿಯಲ್ಲಿ ಪುರುಷರೇ ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬುವುದನ್ನು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯ ಸಂಗಡ ವಿವೇಕದಿಂದ ಒಗತನ ಮಾಡಿರಿ. ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವುದಿಲ್ಲ (1 ಪೇತ್ರ. 3:7). ಕುಟುಂಬದಲ್ಲಿ ಸ್ತ್ರೀ ಪುರುಷರು ಒಮ್ಮತದಿಂದ ಅರ್ಥಮಾಡಿಕೊಂಡು ಜೀವಿಸಿದರೆ ಅದೇ ಕರ್ತನ ಕುಟುಂಬವಾಗಿರುತ್ತದೆ. ಆದರೆ ಗಂಡನು ಒಂದು ದಿಕ್ಕು, ಹೆಂಡತಿ ಒಂದು ದಿಕ್ಕಾದರೆ ಎತ್ತು ಏರಿಗೆ, ಕೋಣ ನೀರಿಗೆ ಎಂಬಂತೆ ಜೀವಿಸುವುದಾದರೆ ಕುಟುಂಬವು ಬೇಗನೆ ಒಡೆಯಲ್ಪಡುವುದು. ಯಾಕೋಬನ ಮಾವನಾದ ಲಾಬಾನನು ಅವನಿಗೆ ಮೋಸ ಮಾಡಿದ ವಿಷಯದಲ್ಲಿ ಯಾಕೋಬನು ತನ್ನ ಹೆಂಡತಿಯರಾದ ಲೇಯ ರಾಹೇಲಳನ್ನು ಪ್ರತ್ಯೇಕವಾಗಿ ಕರೆದು ಈ ವಿಷಯವನ್ನು ಅವರಿಬ್ಬರಲ್ಲಿ ಪ್ರಸ್ತಾಪಿಸುತ್ತಾನೆ. ಅದಕ್ಕೆ ಹೆಂಡತಿಯರ ತೀರ್ಮಾನವೆನೆಂದರೆ 'ದೇವರು ನಿನಗೆ ಹೇಳಿದಂತೆ ಮಾಡು' (ಆದಿ. 31:14–16). ಪ್ರಿಯರೇ ಇದರ ನಿಜವಾದ ಅರ್ಥವೇನೆಂದರೆ ನೀನು ಏನು ಮಾಡಿದರೂ ನಮ್ಮ ಒಪ್ಪಿಗೆ ಇದೆ. ನಾವು ನಿನ್ನವರು ನಿನಗೆ ಸೇರಿದವರು ಎಂದು ತಮ್ಮ ಗಂಡನ ಪಕ್ಷದಲ್ಲಿ ನಿಂತರು.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

**ಡಿಜಿಎಮ್ ಬೇತೇಲ್ ಚರ್ಚ್ ಅರ್ಪಿಸುವ**

**3 ದಿವಸದ**

**ಬಿಡುಗಡೆ ಹಾಗೂ ಸ್ವಸ್ಥತೆಯ ಕೂಟಗಳು**

**ದಿನಾಂಕ: 27.05.16 ರಿಂದ 28–05–2016ರ ವರೆಗೆ ಸಮಯ : ಬೆಳಿಗ್ಗೆ ಗಂಟೆ 10–00 ರಿಂದ**
**ಸ್ಥಳ: ಬೇತೇಲ್ ಚರ್ಚ್ ಯೇಸುಪುರ, ಶಂಕರಪುರ – 574115, ಉಡುಪಿ ಜಿಲ್ಲೆ**
**ನೀವು ಬಂದು ದೇವರ ಆಶೀರ್ವಾದವನ್ನು ಹೊಂದಿಕೊಳ್ಳಿರಿ, ಇತರರನ್ನು ನಿಮ್ಮೊಂದಿಗೆ ಕರೆತನ್ನಿರಿ.**
**ಹೆಚ್ಚಿನ ವಿವರಗಳಿಗಾಗಿ 0091 9902334941, 0091 9964070654ನ್ನು ಸಂಪರ್ಕಿಸಿರಿ.**

ಅವರು ಚೀಯೋನಿನಲ್ಲಿ ಯೆಹೋವ ನಾಮವನ್ನು ವರ್ಣಿಸುವಂತೆಯೂ ಯೆರೂಸಲೇಮಿನಲ್ಲಿ ತನ್ನ ಕೀರ್ತನೆಯನ್ನು ಹಾಡುವಂತೆಯೂ ಮಾಡಿದ್ದಾನೆ (ಕೀರ್ತ. 102:21).

ಆರೋಗ್ಯ ಸ್ವರ

# ಕೆಮ್ಮು ನಿವಾರಕ ತೆಂಗು



ತೆಂಗಿನಕಾಯಿ ಸಂಪೂರ್ಣ ಆಹಾರ. ಮಾನವನ ದೇಹಕ್ಕೆ ಬೇಕಾದ ಎಲ್ಲಾ ಅತ್ಯವಶ್ಯ ಪೋಷಕಾಂಶಗಳು ತೆಂಗಿನಕಾಯಿಯಲ್ಲಿವೆ.

ತೆಂಗಿನ ಕಾಯಿಯು ಪೋಷಕಾಂಶ ಹಾಗೂ ಕೊಬ್ಬಿನಾಂಶವನ್ನು ಒಳಗೊಂಡಿರುತ್ತದೆ. ಅದರಲ್ಲಿ ಎಣ್ಣೆಯ ಅಂಶವು ಹೆಚ್ಚಾಗಿ ಇರುತ್ತದೆ. ತೆಂಗಿನ ಕಾಯಿಯಲ್ಲಿ ಜೀವಸತ್ವಗಳು, ಅಮೈನೋ ಆಮ್ಲಗಳು, ಪೊಟ್ಯಾಷಿಯಂ, ಸೋಡಿಯಂ, ಮೆಗ್ನೇಷಿಯಂ ಹಾಗೂ ರಂಜಕಗಳಿವೆ. ಪ್ರತಿ 100ಗ್ರಾಂ ಒಣಕೊಬ್ಬರಿ ಯಲ್ಲಿ 662ಕ್ಯಾಲೋರಿಗಳಷ್ಟು ಶಕ್ತಿ ಅಡಕವಾಗಿದೆ.

ಮನುಷ್ಯನ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ತೆಂಗಿನಕಾಯಿ ಒಂದು ಉಪಯುಕ್ತ ಆಹಾರ, ಎಳನೀರು ಸುಲಭವಾಗಿ ಜೀರ್ಣವಾಗುತ್ತದೆ. ಎಳನೀರಿನಲ್ಲಿ ಹಲವಾರು ಕಿಣ್ವಗಳು, ಕೊಬ್ಬಿನಂಶ ಹಾಗೂ ಕಾರ್ಬೋಹೈಡ್ರೇಟುಗಳು ಹೇರಳವಾಗಿವೆ. ದೇಹಕ್ಕೆ ಪುಷ್ಟಿದಾಯಕವಾಗಿದ್ದು, 'ಎ' ಜೀವಸತ್ವವನ್ನು ಹೊಂದಿದ ಎಳನೀರು ಮಕ್ಕಳಲ್ಲಿ ಪೋಷಕಾಂಶದ ಕೊರತೆಯನ್ನು ನೀಗಿಸುವುದಲ್ಲದೆ ಎಲ್ಲಾ ರೀತಿಯ ಪ್ರಾಕೃತಿಕ ಖನಿಜಗಳನ್ನು ದೇಹಕ್ಕೆ ಒದಗಿಸಿ ಬೆಳವಣಿಗೆಗೆ ಸಹಾಯವನ್ನು ಮಾಡುತ್ತದೆ. ದೇಹಕ್ಕೆ ದಿನವೊಂದಕ್ಕೆ ಅಗತ್ಯ 'ಸಿ' ಹಾಗೂ 'ಬಿ' ಜೀವಸತ್ವಗಳು ಎಳೆನೀರಿನಲ್ಲಿರುತ್ತವೆ.

**ಒಣಕೆಮ್ಮು ನಿವಾರಣೆಗೆ:** ಹಸುವಿನ ಹಾಲಿನೊಂದಿಗೆ ಸ್ವಲ್ಪ ಪ್ರಮಾಣದ ತೆಂಗಿನಹಾಲು, ಒಂದು ಚಮಚ ಗಸಗಸೆ, ಶುದ್ಧ ಜೇನುತುಪ್ಪದೊಂದಿಗೆ ಪ್ರತಿದಿನ ರಾತ್ರಿ ಮಲಗುವ ಮುನ್ನ ಒಂದು ಚಮಚದಷ್ಟು ಸೇವಿಸಿದರೆ ಒಣಕೆಮ್ಮು, ಗಂಟಲಿನ ಕಿರಿಕಿರಿ, ಧೂಮಪಾನ ಸೇವನೆಯಿಂದ ಉಂಟಾಗುವ ಗಂಟಲಿನ ನೋವು ಗುಣವಾಗುತ್ತದೆ.

**ಜೀರ್ಣಕ್ರಿಯೆಗೆ:** ಎಳೆ ತೆಂಗಿಕಾಯಿ ತಿರುಳು ಜೀರ್ಣಾಂಗವ್ಯೂಹದ ಏರುಪೇರಿಗೆ ಒಳ್ಳೆಯ ಔಷಧ. ಅಜೀರ್ಣ, ವಾಯು ಪ್ರಕೋಪ, ಹೊಟ್ಟೆ ಹುಣ್ಣು, ಅತಿಬೇಧಿ ಮತ್ತು ಮೂಲವ್ಯಾಧಿ ರೋಗಗಳಿಗೆ ಇದು ಒಳ್ಳೆಯ ಔಷಧಿಯಾಗಿದೆ. ವಾಂತಿ ಹಾಗೂ ಅಜೀರ್ಣಕ್ಕೆ ಎಳನೀರು ರಾಮಬಾಣ.

**ಆಮ್ಲೀಯ ತೊಂದರೆ ನಿವಾರಣೆಗೆ:** ಚೆನ್ನಾಗಿ ಬಲಿತಿರುವ ತೆಂಗಿಕಾಯಿ, ಆಮ್ಲೀಯ ತೊಂದರೆಗಳಿಗೆ ಪರಿಣಾಮಕಾರಿ ಔಷಧಿಯಾಗಿದೆ. ತೆಂಗಿನೆಣ್ಣೆಯು ಹೊಟ್ಟೆಯಲ್ಲಿ ಉತ್ಪಾದನೆಯಾಗುವ ಆಮ್ಲಗಳನ್ನು ಕಡಿಮೆ ಮಾಡಿ, ರೋಗಿಗೆ ಆರಾಮವನ್ನು ನೀಡುತ್ತದೆ.

**ಕರುಳಿನ ಹುಳಗಳ ನಿವಾರಣೆಗೆ:** ತೆಂಗಿನಕಾಯಿಯು ಹೊಟ್ಟೆಯಲ್ಲಿರುವ ಹುಳುಗಳಿಗೆ ಪರಿಣಾಮಕಾರಿ ಔಷಧ. ಖಾಲಿ ಹೊಟ್ಟೆಯಲ್ಲಿ ಒಂದು ಚಮಚದಷ್ಟು ತೆಂಗಿನತುರಿಯನ್ನು ಸೇವಿಸಿ, 3 ಗಂಟೆಗಳ ನಂತರ ಒಂದು ಚಮಚದಷ್ಟು ಹರಳೆಣ್ಣೆಯನ್ನು ಕುಡಿದರೆ ಹೊಟ್ಟೆಯಲ್ಲಿರುವ ಎಲ್ಲಾ ಹುಳುಗಳು ನಾಶವಾಗುತ್ತವೆ. ಈ ಕ್ರಮವನ್ನು ಹುಳುಗಳು ನಾಶವಾಗುವವರೆಗೆ ಪುನರಾವರ್ತಿಸಿದರೆ ಒಳ್ಳೆಯದು.

**ಕಾಲರಾ:** ಎಳನೀರು ಕಾಲರಾ ರೋಗಕ್ಕೆ ಬಹಳ ಪರಿಣಾಮಕಾರಿಯಾಗಿದೆ. 8–12 ಔನ್ಸ್‌ನಷ್ಟು ಎಳನೀರಿಗೆ ಒಂದು ಚಮಚದಷ್ಟು ತಾಜಾ ನಿಂಬೆರಸವನ್ನು ಬೆರೆಸಿ, ರೋಗಿಗೆ ಕೊಟ್ಟರೆ ಆತನ ದೇಹದಲ್ಲಿರುವ ಎಲೆಕ್ಟ್ರೋಲೈಟ್ ಸಮತೋಲವಾಗಿ ರಕ್ತದಲ್ಲಿನ ಅಸಿಡೋಸಿಸ್ ಕಡಿಮೆಯಾಗುತ್ತದೆ.

**ಮೂತ್ರಜನಕಾಂಗದ ತೊಂದರೆ:** ತೆಂಗಿನಕಾಯಿಯ ನೀರು ಮೂತ್ರಜನಕಾಂಗದ ತೊಂದರೆಗಳಿಗೆ ಪರಿಹಾರವನ್ನು ನೀಡುತ್ತದೆ. ಅದು ಮೂತ್ರಜನಕಾಂಗ ಹಾಗೂ ಪಿತ್ತಜನಕಾಂಗಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ಹತ್ತಿಕ್ಕಲ್ಪಟ್ಟ ಮೂತ್ರ ವಿಸರ್ಜನಾ ವ್ಯವಸ್ಥೆಯನ್ನು ಸರಾಗವಾಗಿಸುವುದು.

**ಚರ್ಮರೋಗಕ್ಕೆ:** ಬಲಿತ ತೆಂಗಿನಕಾಯಿಯ ಹೋಳಿನಿಂದ ತೆಗೆಯಲ್ಪಟ್ಟ ಎಣ್ಣೆಯು, ಸುಟ್ಟಗಾಯಗಳಿಗೆ ಪರಿಣಾಮಕಾರಿ ಔಷಧಿಯಾಗಿದೆ. ಮುಲಾಮುಗಳ ತಯಾರಿಕೆಯಲ್ಲಿ ತೆಂಗಿನೆಣ್ಣೆಯು ಪ್ರಮುಖ ಪಾತ್ರವಹಿಸುತ್ತದೆ.

ಸಂಗ್ರಹ.

ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ;
ಆತನು ಸಮಸ್ತವನ್ನೂ ಆಳುತ್ತಾನೆ (ಕೀರ್ತ. 103:19).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 0091 9902334941**

---

## ನಿಮ್ಮಗೆಲ್ಲಾ ಸಂತಸ ಸುದ್ದಿ

# VOICE OF GOD

## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (50 / 100ಕೆ.ಜಿ.).
2. ಕುಡಿಯುವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

---

ನೀನು ನಿನ್ನ ಮೇಲಂತಸ್ತುಗಳಿಂದ ಪರ್ವತಗಳಿಗೆ ನೀರು ಕೊಡುತ್ತೀ;
ನಿನ್ನ ಕಾರ್ಯಫಲದಿಂದ ಭೂಮಿಯು ತೃಪ್ತಿಹೊಂದುತ್ತದೆ (ಕೀರ್ತ. 104:13).

# ಚಟುವಟಿಕೆಯುಳ್ಳವರಾಗಿರ್ರಿ!

"ಚಟುವಟಿಕೆಯವನಿಗೆ ಅಮೂಲ್ಯ ಸಂಪತ್ತು ದೊರಕುವದು" (ಜ್ಞಾನೋ. 12:27).

ಚಟುವಟಿಕೆಯುಳ್ಳವನು ಯಾವಾಗಲೂ ತನ್ನ ವಸ್ತುಗಳ ಮೇಲೆ ಗಮನವಿಟ್ಟಿರುತ್ತಾನೆ. ಬಲು ಎಚ್ಚರಿಕೆಯಿಂದ ಕಣ್ಣಿನ ಮೇಲೆ ಕಣ್ಣಿಟ್ಟುಕೊಂಡು ತನ್ನ ವಸ್ತುಗಳನ್ನು ಕಾಪಾಡುತ್ತಾನೆ. ಅವನನ್ನು ಸತ್ಯವೇದವು ಹೊಗಳುತ್ತದೆ. ಚಟುವಟಿಕೆಯುಳ್ಳವನು ಎಂಬ ಪದಕ್ಕೆ ವಿರುದ್ಧ ಪದವು ನಿರ್ವಿಚಾರವುಳ್ಳವನು ಎಂಬದು. ಪ್ರವಾದಿಯಾದ ಆಮೋಸನು ನಿರ್ವಿಚಾರವುಳ್ಳವರನ್ನು ಎಚ್ಚರಿಸುತ್ತಾ ಹೇಳುತ್ತಾನೆ. "ಅಯ್ಯೋ, ಚೀಯೋನಿನಲ್ಲಿ ನೆಮ್ಮದಿಯಾಗಿರುವವರ ಗತಿಯನ್ನು ಏನೆಂದು ಹೇಳಲಿ" (ಆಮೋ. 6:1).

ರಕ್ಷಣೆ ಹೊಂದಿ ದೇವರ ಕನಿಕರವನ್ನು ತಿಳಿದು ಎಚ್ಚರಿಕೆಯಿಲ್ಲದೆ ನಿರ್ವಿಚಾರವಾಗಿ ನೀನಿರುವುದಾದರೆ ನಿನ್ನ ಹಾಗೆ ಪರಿತಪಿಸುವವರು ಯಾರೂ ಇರಲಾರರು. ಕ್ರಿಸ್ತನ ಬರೋಣ ಬಹಳ ಸಮೀಪವಾಗಿದೆ. ಕರ್ತನು ಉಜ್ಜೀವನವನ್ನುಂಟು ಮಾಡಿ ಜನರನ್ನು ಸಿದ್ಧಪಡಿಸುತ್ತಿದ್ದಾನೆ. ದಾಹವುಳ್ಳ ಒಬ್ಬೊಬ್ಬರನ್ನೂ ಅಭಿಷೇಕಿಸುತ್ತಿದ್ದಾನೆ. ಪರಿಶುದ್ಧತೆಯಲ್ಲಿ ಪೂರ್ಣ ಪಡಿಸುತ್ತಿದ್ದಾನೆ. ನೀನು ನಿರ್ವಿಚಾರವುಳ್ಳವನಾಗಿರುವೆಯಾ? ಇಲ್ಲವೇ ಚಟುವಟಿಕೆ ಯುಳ್ಳವನಾಗಿರುವೆಯಾ. ರಸ್ತೆಯಲ್ಲಿ ಬಸ್ಸು ವೇಗವಾಗಿ ಬರುತ್ತಿದೆ. ಒಬ್ಬನು ನಿರ್ವಿಚಾರವುಳ್ಳವನಾಗಿದ್ದರೆ ಅವನ ಸ್ಥಿತಿ ಏನು? ಬಸ್ಸು ಅವನ ಮೇಲೆ ಹರಿದು ಅವನನ್ನು ಕೆಳಗೆ ಬೀಳಿಸಿಬಿಡುತ್ತದಲ್ಲವೇ?

ಪರೀಕ್ಷೆ ಹತ್ತಿರ ಬರುತ್ತಿದೆ ಎಂದು ತಿಳಿದೂ ವಿದ್ಯಾರ್ಥಿಯು ಓದದೇ ನಿರ್ವಿಚಾರವಾಗಿದ್ದರೆ ಪರೀಕ್ಷೆಯಲ್ಲಿ ಅವನು ಫೇಲಾಗುತ್ತಾನೆ ಅಲ್ಲವೇ. ತನ್ನ ಮನೆಯಲ್ಲಿ ಹಣವಿದ್ದರೂ ಬೆಲೆಬಾಳುವ ವಸ್ತುಗಳಿದ್ದರೂ ಬಾಗಿಲಿಗೆ ಬೀಗ ಹಾಕದೆ ಹೋದರೆ ಕಳ್ಳನು ಬಂದು ಕೊಳ್ಳೆ ಹೊಡೆದುಕೊಂಡು ಹೋಗುತ್ತಾನೆ ಅಲ್ಲವೇ? ಪ್ರವಾದಿಯಾದ ಆಮೋಸನು ಎಚ್ಚರಿಸಿ ಹೇಳುತ್ತಾನೆ. ಚೀಯೋನಿನಲ್ಲಿ ನಿರ್ವಿಚಾರನಾಗಿ ಇರುವವನಿಗೆ ಅಯ್ಯೋ! ಸೊದೋಮಿನಲ್ಲಿರುವ ಮಕ್ಕಳ ಪರಿತಾಪಕರ ಸ್ಥಿತಿ ಏನು ಗೊತ್ತೇ? ಅವರ ನಿರ್ವಿಚಾರತೆಯೇ, ತಮಗೆ ಬರಲಿಕ್ಕಿರುವ ನಾಶನದ ಕುರಿತು ಅವರು ಚಿಂತಿಸದೆ ತಿಂದು ಕುಡಿದು ಮನ ಬಂದಂತೆ ಜೀವಿಸುತ್ತಿದ್ದರು.

ಕೊನೆಯಲ್ಲಿ ದೇವರ ಕೋಪಾಗ್ನಿ ಅವರ ಮೇಲಿಳಿಯಿತು. ಕರ್ತನು ಆಕಾಶದಿಂದ ಅಗ್ನಿಯನ್ನು ಸುರಿಸಿ ಗಂಧಕಗಳನ್ನೂ ಸುರಿಸಿ ಅವರೆಲ್ಲರನ್ನೂ ನಾಶ ಮಾಡಿದನು. ಪ್ರವಾದಿಯಾದ ಯೆಹೆಜ್ಕೇಲನು ಪ್ರಲಾಪಿಸುತ್ತಾ ಹೀಗೆ ಹೇಳುತ್ತಾನೆ. ಸೊದೋಮೆಂಬ ನಿನ್ನ ತಂಗಿಯ ದೋಷವನ್ನು ನೋಡು ಹೆಮ್ಮೆ ಪಡುವದು, ಹೊಟ್ಟೆ ತುಂಬಿಸಿಕೊಳ್ಳುವದು, ಸ್ವಸುಖದಲ್ಲಿ ಮುಳುಗಿರುವದು ಇವು ಆಕೆಯಲ್ಲಿಯೂ ಆಕೆಯ ಕುಮಾರ್ತೆಯರಲ್ಲಿಯೂ ಇದ್ದವು. ಇದಲ್ಲದೆ ಆಕೆಯು ದೀನದರಿದ್ರರಿಗೆ ಬೆಂಬಲವಾಗಿರಲಿಲ್ಲ. (ಯೆಹೆ. 16:49). ಹೌದು, ಸೊದೋಮಿನ ನಾಶನಕ್ಕೆ ಕಾರಣ ನಿಶ್ಚಿಂತೆಯೇ.

ಕೆಲವು ತಿಂಗಳುಗಳ ಹಿಂದೆ ಒಬ್ಬನು ಚೆನ್ನೈ ವಿಮಾನ ನಿಲ್ದಾಣದಲ್ಲಿ ಒಂದು ಪೆಟ್ಟಿಗೆ ಇರುವುದಾಗಿಯೂ ಅದರಲ್ಲಿ ಸಿಡಿಮದ್ದುಗಳು ಇರುವುದಾಗಿಯೂ ಹಲವು ಸಾರಿ ಅಧಿಕಾರಿಗಳಿಗೆ ಎಚ್ಚರಿಸಿ ನೋಡಿದನು. ಫೋನ್ ಮೂಲಕವಾಗಿಯೂ ಇಂಥಹ ದಿನ ಆ ಸಿಡಿಮದ್ದು ಸಿಡಿಯುವುದಾಗಿಯೂ ಎಚ್ಚರಿಸಿದನು. ಆದರೆ ಅವರಾದರೋ ನಿಶ್ಚಿಂತರಾಗಿಯೇ ಇದ್ದರು. ನೀವು ಒಂದು ವೇಳೆ ಈ ವಿಷಯವನ್ನು ಪತ್ರಿಕೆಗಳಲ್ಲಿ ಓದಿರಬಹುದು. ಕೊನೆಯಲ್ಲಿ ಏನೂ ತಿಳಿಯದ ಸುಂಕದ ಅಧಿಕಾರಿಗಳು ಬಂದು ಪೆಟ್ಟಿಗೆಯನ್ನು ತೆರೆದು ನೋಡಲು ಪ್ರಯತ್ನಿಸಿದಾಗ ಆ ಸಿಡಿಮದ್ದು ಸಿಡಿದು ಏನೂ ತಿಳಿಯದ ಅವರೆಲ್ಲರೂ ತೀರಿಹೋದರು.

ಸ್ವಲ್ಪ ನಿಶ್ಚಿಂತೆ ಎಷ್ಟು ಜನರ ಪ್ರಾಣಹಾನಿ, ಭಯಂಕರವಾದ ವಿಪತ್ತು ಸಂಭವಿಸಿತು. ಸತ್ಯವೇದವು ಹೇಳುತ್ತದೆ, "ಮೂಢರು ತಮ್ಮ ಉದಾಸೀನತೆಯಿಂದಲೇ ಹತರಾಗುವರು. ಜ್ಞಾನಹೀನರು ತಮ್ಮ ನಿಶ್ಚಿಂತೆಯಿಂದಲೇ ನಾಶವಾಗುವರು" (ಜ್ಞಾನೋ. 1:32).

ದೇವರ ಮಕ್ಕಳೇ, ಲೋಕದ ಅಂತ್ಯಕ್ಕೆ ಬಂದು ಬಿಟ್ಟಿದ್ದೇವೆ. ನಮ್ಮ ಮುಂದೆ ನಿತ್ಯತ್ವವು ಇದೆ. ಒಂದು ನಾವು ಪಾತಾಳದ ಅಗ್ನಿಯಲ್ಲಿ ಪಾಲು ಹೊಂದಬೇಕು, ಇಲ್ಲವೇ ಪರಲೋಕ ರಾಜ್ಯದಲ್ಲಿ ಪರಿಶುದ್ಧ ಭಕ್ತರೊಂದಿಗೆ ಪಾಲು ಹೊಂದಬೇಕು. ಇದನ್ನು ಕುರಿತು ಯಾವ ತೀರ್ಮಾನ ಮಾಡಿರುವಿ? ನಿಶ್ಚಿಂತೆಯಿಂದ ಇರುವಿಯಾ ಇಲ್ಲವೇ ಎಚ್ಚರಿಕೆಯಿಂದ ಇರುವಿಯಾ? "ನೀವು ಮಂದಮತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕೋಸ್ಕರ ಬಹು ದಿನಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ" (ಇಬ್ರಿ. 6:12).

*ಸಂಗ್ರಹ.*

ನಿನ್ನ ನಿಬಂಧನೆಗಳಲ್ಲಿ ಉಲ್ಲಾಸಪಡುವೆನು; ನಿನ್ನ ವಾಕ್ಯವನ್ನು ಮರೆಯುವದಿಲ್ಲ
(ಕೀರ್ತ. 119:16).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಶೋಧನೆಗಳ ಮಧ್ಯದಲ್ಲಿ ನಾವು ಬಿದ್ದು ಹೋಗದೆ, ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ಇರುವ ಯಥಾರ್ಥವನ್ನು ಬಿಟ್ಟು ತೊಲಗಿ ಹೋಗದೆ ಇರಬೇಕಾದರೆ ಅನುಸರಿಸಬೇಕಾದ ಕೆಲವು ಕಾರ್ಯಗಳು.

1) ದೇವರ ವಾಕ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು (ಕೀರ್ತ. 1:1–3, ಅ.ಕೃ. 17:11).

2) ದೇವರ ವಾಕ್ಯಗಳ ಕುರಿತಾಗಿ ಸರಿಯಾದ ತಿಳುವಳಿಕೆ ಹೊಂದಿರಬೇಕು (ಮತ್ತಾ. 13:23, ಜ್ಞಾನೋ. 5:23, ಯೆಶಾ. 5:13, ಜ್ಞಾನೋ. 1:32, ಹೋಶೆ. 4:6, ಮತ್ತಾ. 22:29).

3) ದೇವರ ವಾಕ್ಯದ ಮೇಲೆ ಪರಿಪೂರ್ಣ ನಂಬಿಕೆ ಇಡಬೇಕು (ರೋಮ. 10:17, 2 ತಿಮೋ. 3:15, 1 ಥೆಸ. 2:13).

4) ನಮ್ಮ ಸಭೆಯ ಸಭಾಪಾಲಕರ ಜೊತೆಯಲ್ಲಿ ಆಳವಾದ ಅನ್ಯೋನ್ಯತೆ ಇಟ್ಟುಕೊಂಡವರಾಗಿರಬೇಕು (ಇಬ್ರಿ. 13:17).

**ಯಾವ ರೀತಿ ಅನ್ಯೋನ್ಯತೆ :**

1) ಸೇವಕರಿಗೆ ತಿಳಿಸದೇ ಯಾವುದೇ ಪ್ರಾರ್ಥನಾ ಕೂಟಗಳಿಗೆ ನಾವು ಹೋಗಕೂಡದು. ಕಾರಣ ಅವರು ಪೂರ್ಣ ಸುವಾರ್ತೆಯುಳ್ಳ ಉಪದೇಶಕರೋ ಎಂದು ನಮ್ಮ ಸಭಾಪಾಲಕರಿಗೆ ತಿಳಿದಿರುತ್ತದೆ.

2) ನಮ್ಮ ಸಭಾಪಾಲಕರಿಗೆ ಗೊತ್ತಿಲ್ಲದೆ ಯಾವುದೇ ಸೇವಕರನ್ನು ನಮ್ಮ ಮನೆಗೆ ಕರಿಸಕೂಡದು ಮತ್ತು ಪ್ರಾರ್ಥನಾ ಕೂಟ ಇಡಕೂಡದು. ಅದಕ್ಕೆ ಕಾರಣ ಅವರು ದುರ್ಬೋಧಕರೋ, ಅವರು ಪಾಪದಲ್ಲಿ ಬಿದ್ದು ಹೋದವರೋ, ಹಣದಾಸೆಗಾಗಿ ಸೇವೆ ಮಾಡುವವರೋ ಎಂದು ನಿಮ್ಮ ಸಭಾಪಾಲಕರು ವಿವೇಚಿಸುತ್ತಾರೆ. ಉದಾಹರಣೆ ನಾನು ಹೇಳುತ್ತೇನೆ, ನನಗೆ ಗೊತ್ತಿರುವ ಒಂದು ಸ್ಥಳದಲ್ಲಿ ಒಂದು ಕ್ರೈಸ್ತ ಕುಟುಂಬ ವಾಸವಾಗುತ್ತಿತ್ತು, ಆ ಹುಡುಗನಿಗೆ ಮದುವೆಯಾಗಿ 6 ತಿಂಗಳಾಗಿತ್ತು. ಅವರ ಕುಟುಂಬ ಜೀವಿತ ಸಂತೋಷವಾಗಿತ್ತು. ಒಂದು ದಿನ ಹುಡುಗಿಯ ಮನೆಗೆ ಒಂದು ಪ್ರವಾದಿ ಆಗಮಿಸಿದರು. ಅವರು ಹುಡುಗನ ಫೋಟೋ ನೋಡಿ ಇವನಿಗೆ ಒಂದು ಹುಡುಗಿ ಜೊತೆಯಲ್ಲಿ ಅಕ್ರಮ ಸಂಬಂಧ ಇದೆ ಎಂದು ತಿಳಿಸಿದರು. ಆಗ ಹುಡುಗಿ ತಂದೆ ತಾಯಿ ಭಯಪಟ್ಟು ಕಳವಳಪಟ್ಟರು. 2 ತಿಂಗಳೊಳಗಾಗಿ ವಿವಾಹ ವಿಚ್ಛೇದನ ನಡೆಯಿತು. ಅದಕ್ಕಾಗಿ ಪ್ರಿಯ ದೇವ ಜನರೇ, ನಿಮ್ಮ ಸಭಾಪಾಲಕರಿಗೆ ತಿಳಿಸದೆ ಯಾವುದನ್ನು ಮಾಡಲು ಮುಂದಾಗ ಬೇಡಿರಿ.

3) ನಿಮಗೆ ದೇವರ ವಾಕ್ಯದಲ್ಲಿ ಯಾವುದೇ ಸಂಶಯ ಇದ್ದಲ್ಲಿ ಅದನ್ನು ನಿಮ್ಮ ಸಭಾಪಾಲಕರೊಂದಿಗೆ ಕುಳಿತು ನೀವು ಪರಿಹರಿಸಿಕೊಳ್ಳಬೇಕು (ಲೂಕ. 2:46–47).

4) ಯಾವುದೋ ಒಂದು ಕಾರ್ಯಕ್ಕೆ ಮುಂದಾಗುವಾಗ ಸಭಾಪಾಲಕರ ಆಲೋಚನೆ ಮತ್ತು ಪ್ರಾರ್ಥನೆ ಕೇಳಿಕೊಳ್ಳಿರಿ. (ಜ್ಞಾನೋ. 11:14, 15:22, 20:18, 24:6).

5) ಯಾವುದೇ ಟಿವಿ ಚಾನಲ್‌ನಲ್ಲಿ ನೀವು ಯಾವುದೇ ಉಪದೇಶಕರ ಸಂದೇಶ ಕೇಳುತ್ತಿದ್ದರೋ ಆ ಬೋಧಕರ ಕುರಿತು ನಿಮ್ಮ ಸಭಾಪಾಲಕರಲ್ಲಿ ಚರ್ಚಿಸುವುದು ಅವಶ್ಯಕ. ಅದಕ್ಕೆ ಕಾರಣ ಅನೇಕರು ನಾವು ಯಾವ ಬೋಧಕರ ಸಂದೇಶವನ್ನು ಕೇಳಬೇಕೋ, ನೋಡಬೇಕೋ ಎಂಬ ಪರಿಜ್ಞಾನವಿಲ್ಲದೆ ಅನೇಕರು ಬಿದ್ದು ಹೋಗಿದ್ದಾರೆ. ಉದಾಹರಣೆ:

1) ಕೃಪೆಯ ದುರುಪಯೋಗ ಒಂದು ಸಲ ರಕ್ಷಣೆ ಹೊಂದಿದ ಮೇಲೆ ಪಾಪ ಮಾಡಿ ಹೇಗಾದರೂ ಪರಲೋಕ ಹೋಗುತ್ತಾರೆ ಎಂಬ ನಂಬಿಕೆ.

2) ಅಭಿವೃದ್ಧಿ

3) ಸಭೆಯ ಅನ್ಯೋನ್ಯತೆ ಮತ್ತು ಆರಾಧನೆಯನ್ನು ವಿರೋಧಿಸುವಿಕೆ

6) ಆತ್ಮೀಕ ಪುಸ್ತಕ ಓದುವುದಕ್ಕೆ ಮುಂಚೆ ಯಾವ ಆತ್ಮೀಕ ಪುಸ್ತಕ ಪ್ರೋತ್ಸಾಹದಾಯಕ ಎಂಬುದನ್ನು ಸಲಹೆ ಕೇಳುವುದು ಉತ್ತಮ. ಕಾರಣ ಅನೇಕರು ತಿಳಿಯದೆ ದುರ್ಬೋಧನೆಯ ಪುಸ್ತಕ ಓದಿ ಬಿದ್ದು ಹೋಗಿದ್ದಾರೆ.

7) ನಿಮ್ಮ ಸಭಾಪಾಲಕರನ್ನು ಆಗಾಗ ಆಹ್ವಾನಿಸಿ ನಿಮ್ಮ ಸಮಸ್ಯೆಗಳನ್ನು ಹಂಚಿ ಪ್ರಾರ್ಥಿಸಿಕೊಳ್ಳುವುದು ಸೂಕ್ತ.

ನಿನ್ನ ವಾಗ್ದಾನವನ್ನು ನಿನ್ನ ಸೇವಕನಿಗೋಸ್ಕರ ನೆನಪುಮಾಡಿಕೋ;
ನನ್ನಲ್ಲಿ ನಿರೀಕ್ಷೆಯನ್ನು ಹುಟ್ಟಿಸಿದ್ದೀಯಲ್ಲಾ (ಕೀರ್ತ. 119:49).

**ಪಾತಿವ್ರತ್ಯ (2 ಕೊರಿ. 11:2–3)**

"ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತ್ರಿವ್ರತ್ಯವನ್ನೂ ಬಿಟ್ಟು ಕೆಟ್ಟು ಹೋದೀತೆಂದು ನನಗೆ ಭಯವುಂಟು"

ಶೋಧನೆ ಎಂದರೇನು? ತಪ್ಪಾದದನ್ನು ಮಾಡುವುದಕ್ಕೆ ಬರುವ ಪ್ರೇರೇಪಣೆಯೇ ಶೋಧನೆಯಾಗಿದೆ.

ಪಾತ್ರಿವ್ರತ್ಯ ಎಂದರೇನು ? ಪತ್ನಿಯಾದವಳು ತನ್ನ ಪತಿಗೆ ಮಾತ್ರನೇ ಮೀಸಲಿಡುವಂತ ಒಂದು ಪರಿಶುದ್ಧತೆ ಅರ್ಪಣೆಯಾಗಿದೆ. ಅವಳ ಶರೀರದಲ್ಲಿ ತನ್ನ ಪತಿಗೆ ಮಾತ್ರನೇ ಹಕ್ಕಿರುತ್ತದೆ. ಅವಳು ಶರೀರವನ್ನು ತನ್ನ ಪತಿಗಾಗಿ ಮೀಸಲಿಡುತ್ತಾಳೆ. ತನ್ನ ಶರೀರವನ್ನು ಎಷ್ಟೋ ಕಷ್ಟಗಳು ಬಂದರೂ ತನ್ನ ಪತಿಗಾಗಿ ಕಾಪಾಡಿಕೊಳ್ಳುತ್ತಾಳೆ. ಇದಕ್ಕೆ ಪಾತಿವ್ರತ್ಯ ಎನ್ನುತ್ತಾರೆ.

ನಾವು ರಕ್ಷಣೆ ಹೊಂದುವಾಗ ಕ್ರಿಸ್ತನೊಂದಿಗೆ ನಮಗೆ ನಿಶ್ಚಯವಾಗಿರುತ್ತದೆ. ಕರ್ತನಾದ ಯೇಸುಕ್ರಿಸ್ತನ ರಹಸ್ಯ ಬರೋಣದಲ್ಲಿ ನಷ್ಟವಾದಂತಹ ಮದಲಗಿತ್ತಿಯಾದ ಸಭೆಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಲು ಬರುತ್ತಾನೆ. ಎಫೆ. 5:27 ಹೇಳುತ್ತದೆ, ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು. ನಮಗೆ ಮತ್ತು ಕ್ರಿಸ್ತನಿಗೆ ಇರುವ ಈ ಆಳವಾದ ಸಂಬಂಧ ಮರಣದವರೆಗೆ ಮತ್ತು ಕ್ರಿಸ್ತನ ರಹಸ್ಯ ಬರೋಣದವರೆಗೆ ಕಾಪಾಡಿಕೊಳ್ಳಬೇಕಾಗಿದೆ. ಸೈತಾನನು ಈ ಸಂಬಂಧವನ್ನು ಹಾಳು ಮಾಡಲು ಅನೇಕ ವಿಧವಾದ ಶೋಧನೆ ತಂದು ಹಾಕುತ್ತಾನೆ. ಉದಾಹರಣೆ ಅಕ್ರಮ ಸಂಬಂಧ, ವ್ಯಭಿಚಾರ, ಕುಡುಕತನ, ವಿವಿಧ ಕೆಟ್ಟ ಚಟಗಳು ಇತ್ಯಾದಿ. ಸಂಸೋನನು ವ್ಯಭಿಚಾರ ಪಾಪದಲ್ಲಿ ಬಿದ್ದು ಹೋದ, ದಾವೀದನು ವ್ಯಭಿಚಾರ ಪಾಪದಲ್ಲಿ ಬಿದ್ದು ಹೋದ. ಹಾಗೆಯೇ ಇಂದಿನ ದಿನದಲ್ಲಿ ಅನೇಕ ಕ್ರೈಸ್ತ ವಿಶ್ವಾಸಿಗಳು ಪಾಪದಲ್ಲಿ ಬಿದ್ದು ಹೋಗಿ ಪರಿಶುದ್ಧತೆಯನ್ನು ಕೆಡಿಸಿಕೊಳ್ಳುತ್ತಾರೆ.

5) **ದೇವರ ಮಕ್ಕಳು ದೇವರ ಮೇಲೆ ಇಟ್ಟಿರುವ ನಂಬಿಕೆಯನ್ನು ಕುಗ್ಗಿಸಲು ಸೈತಾನನು ಶೋಧನೆ ತರುತ್ತಾನೆ:–** "ಸಿಮೋನನೇ, ಸಿಮೋನನೇ, ನೋಡು ಸೈತಾನನು ನಿಮ್ಮನ್ನು ಗೋಧಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿಕೊಂಡನು; ಆದರೆ ನಿನ್ನ ನಂಬಿಕೆ ಕುಂದಿ ಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆ ಮಾಡಿಕೊಂಡೆನು. ನೀನು ತಿರುಗಿ ಕೊಂಡ ಮೇಲೆ ನಿನ್ನ ಸಹೋದರರನ್ನು ದೃಢಪಡಿಸು" (ಲೂಕ. 22:31–32).

ಕರ್ತನಾದ ಯೇಸುವಿನ ಶಿಷ್ಯರಲ್ಲಿ ಒಂದು ವಿಷಯದಲ್ಲಿ ಚರ್ಚೆ ಉಂಟಾಗುತ್ತದೆ. ಅದು ಏನೆಂದರೆ ತಮ್ಮಲ್ಲಿ ಹೆಚ್ಚಿನವನು ಯಾರು ಎಂಬುದಾಗಿ ಇದು ಅವರಿಗೆ ಒಂದು ಶೋಧನೆಯಾಗಿತ್ತು. ಇಂದು ಅನೇಕ ಕ್ರೈಸ್ತ ಸೇವಕರು ಆಗಿರಬಹುದು, ಕ್ರೈಸ್ತ ವಿಶ್ವಾಸಿಗಳು ಆಗಿರಬಹುದು ಈ ಒಂದು ವಿಷಯದಲ್ಲಿ ಶೋಧನೆಗೆ ಒಳಗಾಗಿ ನಂಬಿಕೆಯ ಜೀವಿತದಲ್ಲಿ ಮತ್ತು ಸೇವೆಯಲ್ಲಿ ಬಿದ್ದು ಹೋಗಿರುವುದನ್ನು ನಾವು ಕಾಣಬಹುದು. ಅಹಂಭಾವ ಅಥವಾ ಗರ್ವ ಎಂಬುವಂತದ್ದು ಸೈತಾನನಿಂದಲೇ ಬರುತ್ತದೆ. ಸೈತಾನನ ಕುರಿತಾಗಿ ನಾವು ಕಲಿಯುವುದಾದರೆ ಅವನು ಪರಲೋಕದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದವನಾಗಿದ್ದನ್ನು, ಸ್ವರ್ಗದ ಎಲ್ಲಾ ದೇವದೂತರುಗಳನ್ನು, ದೇವರನ್ನು ಆರಾಧಿಸುವಂತಹ, ಆರಾಧನೆಗೆ ನಡೆಸುವಂತಹ ಆರಾಧನೆ ನಾಯಕನಾಗಿದ್ದನು. ಸತ್ಯವೇದ ಹೇಳುತ್ತದೆ, ಅವನು ಬಿದ್ದು ಹೋದ ಎಂಬುದಾಗಿ ಹೇಳುವುದಕ್ಕಿಂತ ಅವನು ದೇವರಿಂದ ದೊಬ್ಬಲ್ಪಟ್ಟನು. "ಗರ್ವದಿಂದ ಭಂಗ; ಉಬ್ಬಿನಿಂದ ದೊಬ್ಬು" ಎಂದು (ಜ್ಞಾನೋ. 16:18). ಇಷ್ಟು ದೊಡ್ಡ ಶ್ರೇಷ್ಠ ಪದವಿಯನ್ನು, ದೇವಾಧಿ ದೇವನನ್ನು ಆರಾಧಿಸುವ ನಾಯಕನ ಸ್ಥಾನವನ್ನು ಆತನು ಕಳೆದುಕೊಂಡನು. ಅದಕ್ಕೆ ಕೆಲವು ಕಾರಣಗಳಿವೆ.

ಈ ಕಾರಣಗಳನ್ನು ನಾವು ತಿಳಿದುಕೊಳ್ಳೋಣ :–

1) ಉಬ್ಬಿದ ಮನಸ್ಸುಳ್ಳವನಾದನು (ಯೆಹೆ. 28:2).
2) ನಾನು ದೇವರು ಎಂಬುದಾಗಿ ಅಂದುಕೊಂಡನು (ಯೆಹೆ. 28:2).
3) ದೇವರ ಆಸನವನ್ನು ಹತ್ತಿಕೊಂಡಿದ್ದೇನೆಂದುಕೊಂಡನು (ಯೆಹೆ. 28:2).

ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು. ಆತನು ನನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ (ಕೀರ್ತ. 40:3).

4) ತನ್ನ ಮನಸ್ಸನ್ನು ದೇವರ ಮನಸ್ಸಿನಷ್ಟು ಹೆಚ್ಚಿಸಿಕೊಂಡನು (ಯೆಹೆ. 28:2).
5) ಅವನಿಗೆ ಮರೆಯಾದ ಮರ್ಮವು ಇರಲಿಲ್ಲ (ಯೆಹೆ. 28:3).
6) ದೇವರು ಅವನಿಗೆ ಕೊಟ್ಟಂತಹ ಅಧಿಕ ಜ್ಞಾನ (ಯೆಹೆ. 28:4).
7) ಅವನ ಮನಸ್ಸು ಅವನ ಆಸ್ತಿಯ ನಿಮಿತ್ತ ಉಬ್ಬಿಕೊಂಡಿತು (ಯೆಹೆ. 28:5).
8) ಅವನ ವೈಭವ (ಯೆಹೆ. 28:7).
9) ಮಿತಿ ಇಲ್ಲದ ವ್ಯಾಪಾರದಿಂದ ಅವನಲ್ಲಿ ಬಲಾತ್ಕಾರವು ತುಂಬಿ ಪಾಪಿಯಾದ (ಯೆಹೆ. 28:16).
10) ಸೊಬಗಿನ ನಿಮಿತ್ತವಾಗಿ ಉಬ್ಬಿಕೊಂಡ (ಯೆಹೆ. 28:17).
11) ಮೆರೆತದಿಂದ ಬುದ್ಧಿಯನ್ನು ಹಾಳುಮಾಡಿಕೊಂಡ (ಯೆಹೆ. 28:18).
12) ಅನ್ಯಾಯವಾದ ವ್ಯಾಪಾರ (ಯೆಹೆ. 28:18).
13) ಅಪಾರವಾದ ಅಪರಾಧಗಳು (ಯೆಹೆ. 28:18).
14) ಅವನಲ್ಲಿನ ಪವಿತ್ರಾಲಯಗಳನ್ನು ಹಾಳುಮಾಡಿಕೊಂಡ (ಯೆಹೆ. 28:18).

**1) ಉಬ್ಬಿದ ಮನಸ್ಸುಳ್ಳವನಾಗಿದ್ದನು** (ಯೆಹೆ. 28:2). ಉಬ್ಬಿದ ಮನಸ್ಸು ಇಂದು ಅನೇಕರಲ್ಲಿ ಬಂದು ಬಿದ್ದು ಹೋಗುವುದನ್ನು ಕಾಣುತ್ತೇವೆ. ಕೆಲವರಿಗೆ ಜ್ಞಾನದ ಕುರಿತು ಉಬ್ಬುವಿಕೆ, ಕೆಲವರಿಗೆ ವಿದ್ಯೆಯ ಕುರಿತು ಉಬ್ಬುವಿಕೆ, ಕೆಲವರಿಗೆ ಹಣದ ಕುರಿತು ಉಬ್ಬುವಿಕೆ, ಕೆಲವರಿಗೆ ಪದವಿಯ ಕುರಿತು ಉಬ್ಬುವಿಕೆ, ಕೆಲವರಿಗೆ ತಲಾಂತುಗಳ ಕುರಿತು, ಕೆಲವರಿಗೆ ವರಗಳ ಕುರಿತು ಹೇಳುತ್ತಾ ಹೋದರೆ ಪುಟಗಳೇ ಸಾಲದು "ಯೆಹೋವನು ಹೀಗನ್ನುತ್ತಾನೆ, ಜ್ಞಾನಿಯು ತನ್ನ ಜ್ಞಾನಕ್ಕೆ, ಪರಾಕ್ರಮಿಯು ತನ್ನ ಪರಾಕ್ರಮಕ್ಕೆ, ಐಶ್ವರ್ಯವಂತನು ತನ್ನ ಐಶ್ವರ್ಯಕ್ಕೆ ಹೆಚ್ಚಳಪಡದಿರಲಿ; ಹೆಚ್ಚಳಪಡುವವನು ತಾನು ನನ್ನನ್ನು ತಿಳಿದು ನಾನು ಲೋಕದಲ್ಲಿ ಪ್ರೀತಿ ನೀತಿ ನ್ಯಾಯಗಳನ್ನು ತೋರ್ಪಡಿಸುವ ಯೆಹೋವನಾಗಿರುವೆನು ಎಂದು ಗ್ರಹಿಸಿಕೊಂಡಿದ್ದೇನೆ ಎಂಬದಕ್ಕೇ ಹೆಚ್ಚಳಪಡಲಿ; ಪ್ರೀತಿ ನೀತಿ ನ್ಯಾಯಗಳೇ ನನಗೆ ಆನಂದವೆಂದು ಯೆಹೋವನು ಅನ್ನುತ್ತಾನೆ" (ಯೆರೆ. 9:23–24). ನನ್ನ ಸೇವೆಯ ಅನುಭವದಲ್ಲಿ ಎಷ್ಟೋ ದೊಡ್ಡ ದೊಡ್ಡ ಸೇವಕರನ್ನು ಕಂಡಿದ್ದೇನೆ, ಅನೇಕ ವಿಶ್ವಾಸಿಗಳನ್ನು ಕಂಡಿದ್ದೇನೆ ಅವರಲ್ಲಿದ್ದಂತಹ ಉಬ್ಬುವಿಕೆಯಿಂದಾಗಿ ಬಿದ್ದು ಹೋಗಿದ್ದಾರೆ. ದೇವರು ನಮ್ಮನ್ನು ಎಷ್ಟೇ ಉನ್ನತಿಗೆ ತೆಗೆದುಕೊಂಡು ಹೋದರೂ, ಎಂಥದೇ ಆಶೀರ್ವಾದ, ತಲಾಂತು, ವರಗಳನ್ನು ಕೊಟ್ಟರೂ ನಾವು ಇವುಗಳ ನಿಮಿತ್ತ ಉಬ್ಬಿಕೊಳ್ಳಬಾರದು. ಯೋಹಾ. 15:5ರಲ್ಲಿ ಕರ್ತನು ನನ್ನನ್ನು ಬಿಟ್ಟು ನೀವು ಏನನ್ನು ಮಾಡಲಾರಿರಿ ಎಂದು ಹೇಳಿದ್ದಾನೆ.

ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನ ಕುರಿತು ಸತ್ಯವೇದ ಏನು ಹೇಳುತ್ತದೆ ಎಂದು ತಿಳಿದುಕೊಳ್ಳೋಣ. "ಇದೆಲ್ಲಾ ರಾಜನಾದ ನೆಬೂಕದ್ನೆಚ್ಚರನ ಅನುಭವಕ್ಕೆ ಬಂತು. ಹನ್ನೆರಡು ತಿಂಗಳು ಕಳೆದನಂತರ ಅವನು ಬಾಬೆಲಿನ ಅರಮನೆಯ ಮೇಲೆ ತಿರುಗಾಡುತ್ತಾ ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾರ್ಮರ್ಥ್ಯ ಬಲದಿಂದ ರಾಜನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವದು ಇಗೋ, ಮಹಾಪಟ್ಟಣವಾದ ಈ ಬಾಬೆಲ್ ಎಂದು ಕೊಚ್ಚಿಕೊಂಡನು. ಈ ಮಾತು ರಾಜನ ಬಾಯಿಂದ ಹೊರಡುತ್ತಿರುವಾಗ ಅರಸನಾದ ನೆಬೂಕದ್ನೆಚ್ಚರನೇ, ನಿನಗಾದ ದೈವೋಕ್ತಿಯನ್ನು ಕೇಳು; ರಾಜ್ಯವು ನಿನ್ನಿಂದ ತೊಲಗಿದೆ, ನೀನು ಮನುಷ್ಯರೊಳಗಿಂದ ತಳ್ಳಲ್ಪಟ್ಟು ಕಾಡುಮೃಗಗಳೊಂದಿಗೆ ವಾಸಿಸುವಿ, ದನಗಳಂತೆ ಹುಲ್ಲುಮೇಯುವದೇ ನಿನಗೆ ಗತಿಯಾಗುವದು; ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ ಎಂಬುದು ನಿನ್ನ ತಿಳುವಳಿಕೆಗೆ ಬರುವದರೊಳಗೆ ಏಳು ವರುಷ ನಿನಗೆ ಹೀಗೆ ಕಳೆಯುವದು ಎಂದು ಆಕಾಶವಾಣಿಯಾಯಿತು. ಈ ನುಡಿಯು ನೆಬೂಕದ್ನೆಚ್ಚರನಲ್ಲಿ ತಕ್ಷಣವೇ ನೆರವೇರಿತು; ಅವನು ಮನುಷ್ಯರೊಳಗಿಂದ ತಳ್ಳಲ್ಪಟ್ಟು ದನಗಳಂತೆ ಹುಲ್ಲು ಮೇಯುತ್ತಾ ಆಕಾಶದ ಇಬ್ಬನಿಯಿಂದ ನೆನೆಯುತ್ತಾ ಇದ್ದನು; ಅವನ ಕೂದಲು ಹದ್ದುಗಳ ಗರಿಯಂತೆಯೂ ಅವನ ಉಗುರು ಹಕ್ಕಿಗಳ ಉಗುರಿನ ಹಾಗೂ ಬೆಳೆದವು" (ದಾನಿ. 4:28–33).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**

ನಮ್ಮ ದೇವರು ನಮ್ಮನ್ನು ವಿಮೋಚಿಸುವದಕ್ಕೋಸ್ಕರ ದೇವರಾಗಿದ್ದಾನೆ; ಕರ್ತನಾದ ಯೆಹೋವನು ಮರಣಕ್ಕೆ ತಪ್ಪಿಸ ಶಕ್ತನಾಗಿದ್ದಾನೆ (ಕೀರ್ತ. 68:20).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ಯೆಹೋವನೇ, ನಿನ್ನ ಮರೆಹೊಕ್ಕಿದ್ದೇನೆ; ಎಂದಿಗೂ ಆಶಾಭಂಗಪಡಿಸಬೇಡ.
ನೀತಿಸ್ಥಾಪಕನಾದ ನೀನು ನನ್ನನ್ನು ಬಿಡಿಸಿ ಪಾರುಮಾಡು (ಕೀರ್ತ. 71:1).

# ರೂತಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**ಹಿಂಜಾರುವಿಕೆಯಿಂದ ತಿರುಗಿ!** ಭಾಗ್ಯವಂತಳಾಗಿ ಹೋದೆನು; ಯೆಹೋವನು ನನ್ನನ್ನು ಗತಿಹೀನಳನ್ನಾಗಿ ಬರ ಮಾಡಿದನು (ರೂತ. 1:21).

ನೊವೊಮಿಯ ದು:ಖಭರಿತವಾದ ಮಾತುಗಳಿವು; ಮನನೊಂದು ವೇದನೆಯಿಂದ ಹೇಳಿದ ಮಾತುಗಳಿವು. ಭಾಗ್ಯವಂತಳಾಗಿ ಹೋಗಿ ಗತಿಹೀನಳಾಗಿ ಹಿಂತಿರುಗಿ ಬಂದೆನು. ಅವಳು ಬೆತ್ಲೆಹೇಮನ್ನು ಬಿಟ್ಟು ಮೋವಾಬ್ ದೇಶಕ್ಕೆ ಹೋದಾಗ ಅವಳಲ್ಲಿ ಸಮೃದ್ಧಿಯಿದ್ದಿತು. ಏಕೆ ಅವಳು ಕೊರತೆಯುಳ್ಳವಳಾಗಿ ಹಿಂತಿರುಗಬೇಕಾಯಿತು? ಏಕೆ ಅವಳು ದು:ಖಿತಳಾಗಿ ತವಕಪಡಬೇಕಾಯಿತು?

## ಮಹಿಳೆಯರ ಸ್ವರ

ಬೆತ್ಲೆಹೇಮೂ, ಮೋವಾಬೂ: ಬೆತ್ಲೆಹೇಮ್ ಎನ್ನುವುದು ರೊಟ್ಟಿಯ ಮನೆ. ಮೋವಾಬ್ ಎನ್ನುವುದು ಶಪಿಸಲ್ಪಟ್ಟ ಸ್ಥಳ. ಬೆತ್ಲೆಹೇಮ್ ಕ್ರಿಸ್ತನು ಹುಟ್ಟಿದ ಸ್ಥಳ. ಮೋವಾಬ್ ದೇಶವಾದರೋ ಲೋಟನ ಹೆಣ್ಣು ಮಕ್ಕಳು ತಂದೆಯೊಂದಿಗೆ ವ್ಯಭಿಚಾರ ಮಾಡಿ ಪಾಪ ಮಾಡಿದ ಸ್ಥಳ. ಪರಿಶುದ್ಧವಾದ ಸ್ಥಳದಿಂದ ಪಾಪ ಮಾಡಿದ ಸ್ಥಳಕ್ಕೆ ಹೋದರೆ ಬಡತನವನ್ನೂ ವಂಚನೆಯನ್ನೂ ನಾವು ಅನುಭವಿಸಬೇಕಾಗುತ್ತದೆ. ಕ್ರಿಸ್ತನನ್ನು ಬಿಟ್ಟು ಪಾಪದ ಮಾರ್ಗದಲ್ಲಿ ಹೋದರೆ ನಿಶ್ಚಯವಾಗಿಯೂ ನಾವು ಆಶೀರ್ವಾದ ಕಳೆದುಕೊಳ್ಳುತ್ತೇವೆ. ಇದಕ್ಕೆ ನೂರಾರು ಉದಾಹರಣೆಗಳನ್ನು ನಾವು ಹೇಳಬಹುದು. ಒಬ್ಬ ಕೆಟ್ಟ ಮಗನು ತಂದೆಯನ್ನು ಬಿಟ್ಟು ಹೋಗುವಾಗ ಸಮೃದ್ಧಿಯುಳ್ಳವನಾಗಿ ಹೋದನು. ಅವನಲ್ಲಿದ್ದ ಹಣ ಅವನಿಗೆ ಸಂತೋಷವನ್ನೇ ಕೊಡಲಿಲ್ಲ. ಸ್ನೇಹಿತರೂ ಅವನಿಗೆ ಸಂತೋಷ ಕೊಡಲಿಲ್ಲ. ಅವನು ತನ್ನ ಹಣವನ್ನೆಲ್ಲಾ ಕಳೆದುಕೊಂಡನು. ಸ್ನೇಹಿತರು ಕೈ ಬಿಟ್ಟರು. ಕೊನೆಯಲ್ಲಿ ಅವನಿಗೆ ಹಂದಿಗಳು ತಿನ್ನುವ ಆಹಾರವೂ ಕೂಡ ಸಿಗದೆ ಹೋಯಿತು. ಎಷ್ಟು ಪರಿತಾಪ! ಅಲ್ಲಿ ಒಂದು ದಿನ ಅವನು ಯೋಚಿಸಿರಬಹುದು. ಅಯ್ಯೋ, ನನ್ನ ತಂದೆಯ ಮನೆಯಲ್ಲಿ ಕೆಲಸಗಾರರೂ ಕೂಡ ಸಮೃದ್ಧಿಯಾಗಿ ಊಟ ಮಾಡುತ್ತಾರಲ್ಲಾ, ನಾನಾದರೋ ಇಲ್ಲಿ ಗತಿಹೀನನಾಗಿ ವೇದನೆಯುಳ್ಳವನಾಗಿ ಚಿಂದಿ ಬಟ್ಟೆಯನ್ನುಟ್ಟು ಹಂದಿ ತಿನ್ನುವ ಆಹಾರವೂ ಇಲ್ಲದೇ ಇರುವೆನಲ್ಲಾ ಎಂದು ಯೋಚಿಸಿದವನು, ತಂದೆಯ ಮನೆಗೆ ಹಿಂತಿರುಗಿ ಹೋಗಲು ತೀರ್ಮಾನಿಸುತ್ತಾನೆ. ದೇವಮಗುವೇ, ನೀನು ಕೊರತೆಯುಳ್ಳವನಾಗಿರುವೆಯಾ? ಕ್ರಿಸ್ತನನ್ನು ಬಿಟ್ಟು ದೂರವಾಗಿರುವೆಯಾ? ಕರ್ತನ ಬಳಿಗೆ ಓಡಿ ಬಾ. ಸತ್ಯವೇದದಿಂದ ಇನ್ನೊಂದು ಉದಾಹರಣೆಯನ್ನು ನಾನು ನಿಮಗೆ ಹೇಳಲು ಬಯಸುತ್ತೇನೆ ಒಬ್ಬ ಮನುಷ್ಯನು ಯೆರೂಸಲೇಮಿನಿಂದ ಯೆರಿಕೋವಿನೆಡೆಗೆ ಹೋಗುತ್ತಿದ್ದನು. ಯೆರೂಸಲೇಮು ದೇವನಗರ; ಸಮಾಧಾನದ ಪಟ್ಟಣ; ಉನ್ನತವಾದ ದೇವರ ಮಹಿಮೆಯಾದ ಆಲಯವು ಆದರೆ ಅವನು ಅದನ್ನು ಬಿಟ್ಟು ಯೆರಿಕೋವಿಗೆ ಹೋದಾಗ ಕಳ್ಳರ ಕೈಗೆ ಸಿಕ್ಕಿ ಬೀಳುತ್ತಾನೆ. ಅವನಲ್ಲಿದ್ದ ಹಣ ಒಡವೆ ವಸ್ತುಗಳು ಎಲ್ಲವನ್ನೂ ಕಳೆದುಕೊಂಡನು. ಸಂಪಾದಿಸಿದ ಎಲ್ಲವನ್ನೂ ಕಳೆದುಕೊಂಡನು. ಮಾತ್ರವಲ್ಲ ಯೆರಿಕೋವಿಗೆ ಹೋಗುವ ದಾರಿಯಲ್ಲಿ ಗಾಯಪಟ್ಟು ಅರೆ ಜೀವವಾಗಿ ಬಿದ್ದಿದ್ದನು. ಸಮೃದ್ಧಿಯನ್ನು ಕಳೆದುಕೊಂಡನು. ಸಂತೋಷ ಹಾಗೂ ಸಮಾಧಾನವನ್ನೂ ಕಳೆದುಕೊಂಡನು. ಎಷ್ಟು ಪರಿತಾಪಕರ ಸ್ಥಿತಿ!

ಅಂದು ಸಂಸೋನನು ಇಸ್ರಾಯೇಲ್ ದೇಶವನ್ನು ಬಿಟ್ಟು ವಿದೇಶಿಯರ ದೇಶದಲ್ಲಿ ತನ್ನ ಸಮಯವನ್ನು ಕಳೆದನು. ಆತ್ಮೀಕ ಸ್ನೇಹಿತರ ಅನ್ಯೋನ್ಯತೆಯಿಲ್ಲದೆ ಹೋಯಿತು. ವೇಶ್ಯೆಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದನು. ಅಂದೇ ಅವನು ತನ್ನ ಕಣ್ಣುಗಳನ್ನು ಕಳೆದುಕೊಳ್ಳಬೇಕಾಯಿತು. ಬೇಡಿಗಳನ್ನು ಹಾಕಿಸಿಕೊಂಡನು. ಫಿಲಿಷ್ಟಿಯರ ಹಾಸ್ಯಕ್ಕೆ ಗುರಿಯಾದನು. ದೇವರನ್ನು ಬಿಟ್ಟು ದೂರವಾದರೆ ಎಷ್ಟು ಪರಿತಾಪಕರ ಸ್ಥಿತಿ! ಯೋನನನ್ನು ಗಮನಿಸಿರಿ. ನಿನವೆ ಪಟ್ಟಣಕ್ಕೆ ಹೋಗಬೇಕಾದ ಅವನು ತಾರ್ಷಿಷಿಗೆ ಹೋಗುವ ಹಡಗನ್ನೂ ಹತ್ತಿದನು. ಕರ್ತನ ಚಿತ್ತಕ್ಕೆ ವಿರುದ್ಧವಾಗಿ ನಡೆದನು. ಕರ್ತನಿಗೆ ವಿಧೇಯನಾಗುವುದಕ್ಕಿಂತಲೂ ತನ್ನ ಸ್ವಂತ ಇಷ್ಟದಂತೆ ನಡೆಯಲು ತೀರ್ಮಾನಿಸಿದನು. ಅಂತ್ಯ ಏನಾಯಿತು. ಸಮುದ್ರ ಭೋರ್ಗರೆಯಿತು. ಹಡಗು ಒಡೆದು ಹೋಗುವ ಹಾಗಾಯಿತು. ಕೊನೆಯಲ್ಲಿ ಯೋನನು ಮೀನಿನ ಹೊಟ್ಟೆಯಲ್ಲಿ ಮೂರು

ದಿನ ಹಗಲೂ ರಾತ್ರಿ ಕಳೆಯಬೇಕಾಯಿತು. ಅಲ್ಲಿ ಅವನು ದೇವರನ್ನು ಕೂಗಿಕೊಳ್ಳಬೇಕಾಯಿತು. ಹಿಂಜಾರುವಿಕೆಯು ಯಾವಾಗಲೂ ವೇದನೆಯನ್ನು ತರುವಂಥದ್ದೇ ಆಗಿದೆ. ಅಂದು ಪೇತ್ರನು ಕರ್ತನನ್ನು ನೋಡಿ ಹೀಗೆಂದನು. ದೇವರೇ, ನಾವು ಯಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನುಂಟು ಮಾಡುವ ವಾಕ್ಯಗಳುಂಟು ಎಂದನು. ಕರ್ತನನ್ನು ಬಿಟ್ಟರೆ ಇನ್ಯಾರನ್ನು ಸೇವಿಸಬೇಕೆಂದಿದ್ದೀರಿ? ಬೇರೆ ಆಶ್ರಯ ನಿಮಗೆ ಇನ್ನೆಲ್ಲಿದೆ? ಬೇರೆ ಸಂರಕ್ಷಣೆ ಇನ್ನೆಲ್ಲಿದೆ? ಕ್ರಿಸ್ತನನ್ನು ಬಿಟ್ಟರೆ ನಮಗೆ ಬೇರೆ ಆಶ್ರಯವು ಇನ್ನೆಲ್ಲಿಯೂ ಇಲ್ಲವೇ ಇಲ್ಲ! ಹಿಂಜಾರುವಿಕೆಯ ಜೀವಿತವು ನಮ್ಮನ್ನು ದು:ಖಕರವಾದ ಸ್ಥಿತಿಗೆ ನಡೆಸುತ್ತದೆ. ದೇವಮಗುವೇ, ಸ್ವಲ್ಪ ನಿನ್ನನ್ನು ಕುರಿತು ಆಲೋಚಿಸು. ನಿನ್ನ ಪ್ರಾರ್ಥನೆಯ ಜೀವಿತ ಕುಂದಿ ಹೋಗಿದೆಯಾ? ಸತ್ಯವೇದವನ್ನು ಓದುವುದು ಕಡಿಮೆಯಾಗಿರುವುದೋ? ದೇವಜನರ ಅನ್ಯೋನ್ಯತೆಯು ಇಲ್ಲವಾಗಿದೆಯಾ? ಈಗಲೇ ನಿನ್ನ ಮೊದಲಿದ್ದ ಪ್ರೀತಿಗೆ ಹಿಂತಿರುಗು. ಕರ್ತನು ಹೇಳುತ್ತಾನೆ. ಮೊದಲ್ಲಿದ್ದ ನಿನ್ನ ಪ್ರೀತಿಯನ್ನು ನೀನು ತೊರೆದು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ (ಪ್ರಕ. 2:45). ನೊವೋಮಿಯು ಭಾಗ್ಯವಂತಳಾಗಿದ್ದಳು. ಅವಳು ಮೋವಾಬಿಗೆ ಏಕೆ ಹೋಗಬೇಕಾಗಿತ್ತು? ಅವಳ ಕೊರತೆಗಳನ್ನೂ ಅಗತ್ಯತೆಗಳನ್ನು ಬೆತ್ಲೆಹೇಮಿನಲ್ಲಿದ್ದ ದೇವಜನರೊಂದಿಗೆ ಅನುಭವಿಸಿರ ಬಹುದಾಗಿತ್ತಲ್ಲ? ಯಾಕೋ ಏನೋ ಅವಳು ವಾಗ್ದತ್ತದ ದೇಶವನ್ನೂ ಬಿಟ್ಟು ಬಿಡಬೇಕಾಯಿತು. ಹಾಲೂ ಜೇನೂ ಹರಿಯುವ ಕಾನಾನ್ ದೇಶಕ್ಕಿಂತಲೂ ಮೋವಾಬಿನ ಆಕರ್ಷಣೆಯೇ ಅವಳಿಗೆ ಹೆಚ್ಚಾಗಿತ್ತು. ಮೂಲ ಪಿತೃಗಳಾದ ಅಬ್ರಹಾಮ್ ಇಸಾಕ್ ಯಾಕೋಬರು ಸಂಚರಿಸಿದ ದೇಶವನ್ನೂ ಕರ್ತನಿಂದ ಆಶೀರ್ವದಿಸಲ್ಪಟ್ಟ ದೇಶವನ್ನು ದಿಢೀರೆಂದು ಬಿಟ್ಟು ಬರಲು ತೀರ್ಮಾನಿಸಿದಳು. ದೇವಜನರ ಐಕ್ಯತೆ ಹೋಯಿತು. ಸಮಸ್ಯೆಗಳಿಂದ ದೂರ ಓಡುವುದು ಒಳ್ಳೆಯದಲ್ಲ. ಅದರಿಂದ ಸಮಸ್ಯೆಯು ಬಗೆ ಹರಿಯುವುದಿಲ್ಲ. ಅನೇಕರು ಈ ಸಮಸ್ಯೆಗಳನ್ನು ಎದುರಿಸಲಾರದೆ ಲೌಕೀಕ ಇಚ್ಛೆಗಳಿಗೆ ಬಲಿಯಾಗುವರು. ಕುಡಿತದ ಮೊರೆ ಹೋಗುವರು. ಸಿನಿಮಾಗೆ ಹೋಗುವರು. ಸೋಲುವಿಕೆಯಿಂದ ಬಿಡುಗಡೆ ಹೊಂದಲು ಸ್ನೇಹಿತರೊಡನೆ ಊರೂರು ಸುತ್ತುವರು. ಇದರಿಂದ ಇನ್ನೂ ಹೆಚ್ಚು ಸಮಸ್ಯೆಗಳು ಉದ್ಭವಿಸುವದೇ ಹೊರತು ಸಮಸ್ಯೆಗೆ ಪರಿಹಾರ ಸಿಕ್ಕುವುದಿಲ್ಲ. ನೊಮೋಮಿಯೂ ಅವಳ ಗಂಡ ಮತ್ತು ಇಬ್ಬರು ಮಕ್ಕಳು ಬರಗಾಲದಿಂದ ತಪ್ಪಿಸಿಕೊಳ್ಳಲು ಮೋವಾಬ್ ದೇಶಕ್ಕೆ ಹೋದರು. ಆದರೆ ಅಲ್ಲಿ ಅವರು ಅದಕ್ಕಿಂತಲೂ ಹೆಚ್ಚಿನ ಕಷ್ಟಗಳನ್ನು ಎದುರಿಸಬೇಕಾಯಿತು. ಬರಗಾಲದಲ್ಲಿ ಅವರನ್ನು ಸಂರಕ್ಷಿಸಿ ಕಾಪಾಡುವ ಕರ್ತನನ್ನು ಬಿಟ್ಟು ಅವರು ಆತನನ್ನು ನಂಬದೆ ಹಾಲೂ ಜೇನೂ ಹರಿಯುವ ದೇಶದಲ್ಲಿ ನಂಬಿಕೆಯಿಂದ ಜೀವಿಸದೆ ಬೆನ್ನು ಹಾಕಿ ದೇವಜನರನ್ನೂ ದೇವರ ಮಕ್ಕಳ ಅನ್ಯೋನ್ಯತೆಯನ್ನೂ ಬಿಟ್ಟು ಓಡಿದರು. ಅವರ ಹಿಂಜಾರುವಿಕೆಗೆ ಕಾರಣವೇನು? ಅವರಲ್ಲಿ ನಂಬಿಕೆಯಿರಲಿಲ್ಲ. ಕರ್ತನೊಂದಿಗೆ ಆಳವಾದ ಐಕ್ಯತೆಯಿರಲಿಲ್ಲ! ಬಡತನವೋ ಭಯಂಕರವಾದ ಖಾಯಿಲೆಯೋ ಬರುವಾಗ ದೇವ ಸನ್ನಿಧಾನದಲ್ಲಿ ಕುಳಿತು ಕಾರಣವನ್ನು ವಿಚಾರಿಸಲು ಅವರಲ್ಲಿ ಭಕ್ತಿಯಿರಲಿಲ್ಲ! ಧರ್ಮೋಪದೇಶಕಾಂಡ 28 ಅಧ್ಯಾಯದಲ್ಲಿ ಬಡತನವು (ಬರಗಾಲವು) ದೇವರ ಶಿಕ್ಷೆ ಎಂದು ಓದುತ್ತೇವೆ.

ದೇವಜನರು ಕರ್ತನ ಧ್ವನಿಗೆ ಕಿವಿಗೊಡದೇ ದೂರವಾಗಿ ಹೋದಾಗ ತನ್ನ ಜನರನ್ನು ಶಿಕ್ಷಿಸಲು ಬಡತನ ಹಾಗೂ ಬರಗಾಲವನ್ನು ದೇಶಕ್ಕೆ ಕಳುಹಿಸುತ್ತಾನೆ. ಅಪೋಸ್ತಲನಾದ ಪೌಲನು ಬರೆಯುತ್ತಾನೆ, ನನ್ನ ಮಗನೇ ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ. ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ (ಇಬ್ರಿ. 12:5). ನೊವೊಮಿಯ ಗಂಡನಾದ ಎಲಿಮೆಲೆಕನು ದೇವರ ಶಿಕ್ಷೆಯನ್ನು ತಾತ್ಸಾರ ಮಾಡಿ ಅದರಿಂದ ಓಡಿ ಹೋಗಲು ತೀರ್ಮಾನಿಸಿದನು. ಎಲಿಮೆಲೆಕನೆಂದರೆ ದೇವರು ನನ್ನ ರಾಜನಾಗಿದ್ದಾನೆ ಎಂದರ್ಥ. ಆದರೆ ಹೆಸರಿಗೆ ಮಾತ್ರ ಅವನು ಆ ರೀತಿ ಇದ್ದನೇ ಹೊರತು ದೇವರನ್ನು ನಿಜವಾಗಿಯೂ ಅವನು ತನ್ನ ಅರಸನನ್ನಾಗಿ ಮಾಡಿಕೊಂಡಿರಲಿಲ್ಲ. ಕರ್ತನ ಮಾರ್ಗದಲ್ಲಿ ಅವನು ನಡೆಯುವವನಾಗಿರಲಿಲ್ಲ. ಆತ್ಮೀಕ ರೀತಿಯಲ್ಲಿ ಅವನು ಜೀವಿಸದೆ ಶರೀರದಾಶೆಗಳಿಗೆ ಒಳಗಾಗಿ ಜೀವಿಸುತ್ತಿದ್ದುದ್ದರಿಂದ ಕರ್ತನಿಂದ ದೂರ ಹೋದನು. ದೇವಮಗುವೇ, ಕರ್ತನನ್ನು ಬಿಟ್ಟು ದೂರವಾಗಿ ಇರುವ ಐಶ್ವರ್ಯದಿಂದ ಏನು ಪ್ರಯೋಜನ? ಕರ್ತನಿಂದ ಸಿಗಲಾರದ ಐಶ್ವರ್ಯದಿಂದ ಏನೂ ಪ್ರಯೋಜನವಿಲ್ಲ. ದೇವಮಗುವೇ, ಕ್ರಿಸ್ತನಿಲ್ಲದೆ ನೀನು ಐಶ್ವರ್ಯವಂತನಾಗಿರುವುದಕ್ಕಿಂತಲೂ ಕ್ರಿಸ್ತನೊಂದಿಗೆ ಸ್ವಲ್ಪ

ದೇವರೇ, ನಿನ್ನ ನೀತಿಯು ಆಕಾಶವನ್ನು ನಿಲುಕುವಷ್ಟು ಮಹೋನ್ನತವಾಗಿದೆ (ಕೀರ್ತ. 71:19).

ಕಾಲವಾದರೂ ನೀತಿವಂತನಾಗಿರುವುದಾದರೆ ನಿನಗೆ ಸಮಾಧಾನ ಸಂತೋಷವು ಪರಿಪೂರ್ಣವಾಗಿ ಸಿಕ್ಕುವುದು. ಅಂದು ಮೋಶೆ ದೇವರ ಬಳಿಯಲ್ಲಿ ಹೀಗೆ ಪ್ರಾರ್ಥಿಸಿದನು. ನಿನ್ನ ಸನ್ನಿಧಾನವಿಲ್ಲದ ಕಾನಾನ್ ನನಗೆ ಬೇಡ. ನಿನ್ನ ಪ್ರಸನ್ನತೆಯಿಲ್ಲದೆ ಮನಸ್ಸಂತೋಷವು ನನಗೆ ಬೇಡವೇ ಬೇಡ. ನೀನಿರುವ ಅರಣ್ಯವೇ ನನಗೆ ಸಾಕು. ಮೋಶೆ ಪ್ರಾರ್ಥಿಸುವಾಗ ಹೀಗನ್ನುತ್ತಾನೆ. ದೇವರೇ ನೀನೇ ನಮ್ಮ ಸಂಗಡ ಬಾರದೇ ಹೋದರೆ ನಮ್ಮನ್ನು ಇಲ್ಲಿಂದ ಹೋಗಗೊಡಿಸಬಾರದು ಎಂದು ಪ್ರಾರ್ಥಿಸುತ್ತಾನೆ. ಎಲಿಮೆಲೆಕನಿಗೂ ನೊವೋಮಿಗೂ ಇದೆಲ್ಲವೂ ತಿಳಿದಿದ್ದರೂ ಕೂಡ ದೇವರ ಸನ್ನಿಧಾನವಿಲ್ಲದ ಮೋವಾಬನ್ನು ಆರಿಸಿಕೊಂಡರು.

ಅಂದು ಒಬ್ಬ ಕುಷ್ಠರೋಗಿ ಹೀಗೆ ಪ್ರಾರ್ಥಿಸುತ್ತಾನೆ. "ದೇವರೇ ನಿನ್ನ ಚಿತ್ತವಿದ್ದರೆ ಮಾತ್ರ ನನ್ನನ್ನು ಶುದ್ಧಮಾಡು" ಎಂದನು. ನಿನಗೆ ಚಿತ್ತವಿಲ್ಲದಿದ್ದರೆ ನಾನು ಹೀಗೆಯೇ ಕುಷ್ಠರೋಗಿಯಾಗಿಯೇ ಇರುತ್ತೇನೆ. ನಿನಗೆ ಚಿತ್ತವಿಲ್ಲದ ಶುದ್ಧತೆಯನ್ನು ನಾನು ಅನುಭವಿಸುವುದಕ್ಕಿಂತಲೂ ನಿನ್ನ ಚಿತ್ತದಂತೆಯೇ ನಾನು ನೋವನ್ನು ಸಹಿಸಿಕೊಳ್ಳುವುದೇ ಶ್ರೇಷ್ಠತೆಯೆಂದು ನಾನು ನೆನಸುತ್ತೇನೆ. ಯೇಸು 40 ದಿನಗಳು ಅರಣ್ಯದಲ್ಲಿ ಉಪವಾಸವಿದ್ದಾಗ ಆತನಿಗೆ ಹಸಿವೆ ಆಯಿತು. ಆದರೆ ಆ ಹಸಿವೆಯನ್ನು ನೀಗಿಸಲು ಸೈತಾನನು ಕೊಟ್ಟ ಆಲೋಚನೆಯನ್ನು ಕ್ರಿಸ್ತನು ಸ್ವೀಕರಿಸಲಿಲ್ಲ. ಸುಲಭವಾಗಿ ಕಲ್ಲನ್ನು ರೊಟ್ಟಿ ಮಾಡಿ ತಿನ್ನಬಹುದಾಗಿತ್ತು. ಆದರೆ ಅದು ಒಳ್ಳೆಯದಾಗುತ್ತಿರಲಿಲ್ಲ. ದೇವರ ಚಿತ್ತದಂತೆ ನಡೆಯುವುದೇ ಒಳ್ಳೆಯ ಅಂತ್ಯ. ದೇವರ ಬಾಯಿಂದ ಹೊರಡುವ ಮಾತೇ ನನಗೆ ಸಾಕು ಎಂದು ಯೇಸು ಸೈತಾನನಿಗೆ ಉತ್ತರಿಸುತ್ತಾನೆ. ತಂದೆಯ ಚಿತ್ತಕ್ಕೆ ವಿರೋಧವಾದ ಕಾರ್ಯ ಮಾಡಲು ಯೇಸು ಒಪ್ಪಲಿಲ್ಲ. ಅನೇಕರು ಕಷ್ಟದ ಸಮಯಗಳಲ್ಲಿ ಹೋರಾಟದ ಸಮಯಗಳಲ್ಲಿ ಹೇಗಾದರೂ ನಾವು ಬದುಕಬೇಕೆಂದು ಆಲೋಚಿಸುತ್ತಾರೆ. ಹೇಗಾದರೂ ಮಾಡಿ ಹಣ ಸಂಪಾದಿಸೋಣ ಎನ್ನುತ್ತಾರೆ. ಮಾನ ಇದ್ದರೆಷ್ಟು ಬಿಟ್ಟರೆಷ್ಟು ಎಂದು ಹೇಳುತ್ತಾ ಸೋಲನ್ನು ಎದುರಿಸಲೂ ಸಮಸ್ಯೆಗಳಿಂದ ಬಿಡುಗಡೆ ಹೊಂದಲೂ ಯೋಚಿಸಿ ಅನೇಕ ತಂತ್ರಗಳನ್ನು ಮಾಡಿ ಸೈತಾನನ ಬಂಧನಕ್ಕೊಳಗಾಗುತ್ತಾರೆ. ಇದರಿಂದ ಅವರು ಇನ್ನೂ ಅನೇಕ ಶೋಧನೆಗಳಿಗೆ ಒಳಗಾಗುವರೇ ವಿನಹ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವುದಿಲ್ಲ. ಎಲಿಮೆಲೆಕನಿಗೂ ನೊವೊಮಿಗೂ ಮೋವಾಬ್ ದೇಶವು ಸಂತೈಸುವ ಸ್ಥಳವಾಗಿರಲಿಲ್ಲ. ಯಾವ ದೇವರ ಮಕ್ಕಳಿಗೂ ಪಾಪದ ಜೀವಿತವು ಸಮಾಧಾನ ಕೊಡುವುದಿಲ್ಲ. ನೊವೋಮಿ ಹಾಗೂ ಅವಳ ಕುಟುಂಬವು ಮೋವಾಬಿಗೆ ಹೋಗಲು ಸುಮಾರು 50 ಮೈಲಿಗಳಷ್ಟು ಪ್ರಯಾಣ ಮಾಡಬೇಕಾಗಿತ್ತು. 50 ಮೈಲಿಗಳ ಪ್ರಯಾಣ ಕಾಲದಲ್ಲಿ ದೇವರಾತ್ಮನು ಅವರೊಂದಿಗೆ ಎಷ್ಟು ಹೋರಾಡಿದ್ದಿರಬಹುದು? ಮನಸ್ಸಾಕ್ಷಿಯನ್ನು ಎಚ್ಚರಿಸಿರಬಹುದು! ಆದರೆ ಅವರ ಹೃದಯವಾದರೋ ಕಠಿಣವಾಗಿತ್ತು.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**


# ಡಿಜಿಎಮ್ ಬೇತೇಲ್ ಚರ್ಚ್ ಟ್ರಸ್ಟ್ (ರಿ)

ಇದರ ವತಿಯಿಂದ ಆರಂಭಗೊಂಡಿರುವ ನೂತನ ಟಿವಿ ಚಾನೆಲ್

## ಆಸರೆ 24X7

**ಸುವಾರ್ತೆಯೊಂದಿಗೆ ಸಮಾಜ ಸೇವೆ**

*Digital Set Top Box No. 883*

**ಡಿಜಿಎಮ್ ಬಿಸಿ ಟ್ರಸ್ಟ್ (ರಿ),** ಬೇತೇಲ್ ಚರ್ಚ್ ರಸ್ತೆ, ಇನ್ನಂಜೆ ಗ್ರಾಮ,
ಯೇಸುಪುರ, ಶಂಕರಪುರ, ಉಡುಪಿ – 574115, ಕರ್ನಾಟಕ.
ದೂರವಾಣಿ ಸಂಖ್ಯೆ: 9902334941, 9844265602, 0820 2559202, 0820 2589070


ನಿನ್ನ ಮಂದಿರದಲ್ಲಿ ವಾಸಿಸುವವರು ಧನ್ಯರು. ಅವರು ನಿತ್ಯವೂ ನಿನ್ನನ್ನು ಕೀರ್ತಿಸುತ್ತಾ ಇರುತ್ತಾರೆ (ಕೀರ್ತ. 84:4).

**ವಿಶೇಷ ಸೂಚನೆ**

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್
## ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ


**0091 820 2002781, 0091 9902334941**

---




# ನಮ್ಮೊಂದಿಗೆ ಆಚರಿಸಿ





ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ

ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ

**ಮೊಬೈಲ್: 0091 9902334941**

“ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ.” ಜ್ಞಾನೋಕ್ತಿ 22:9.

**ಮಕ್ಕಳ ಸ್ವರ**

1. ಲೋಹದಿಂದ ಬಸವನನ್ನು ಮಾಡಿದವರು ಯಾರು?
2. ಆರ್. ಅಕ್ಷರದಿಂದ ಪ್ರಾರಂಭವಾಗುವ ಮೂವರು ಸ್ತ್ರೀಯರು ಯಾರು?
3. ಹಾಮನನ ಕುರಿತಾಗಿರುವ ಪುಸ್ತಕ ಯಾವುದು?
4. ಯೇಸುಕ್ರಿಸ್ತನು ಹುಟ್ಟುವ ಸಮಯದಲ್ಲಿ ಸಿರಿಯಾಯದಲ್ಲಿ ರೋಮನ್ ಸಾಮ್ರಾಜ್ಯವನ್ನು ಆಳುತ್ತಿದ್ದವನು ಯಾರು?
5. ಪ್ರಿಸ್ಕಿಲ್ಲಳ ಗಂಡನ ಹೆಸರೇನು?
6. ಎಫೆಸ ದೇವತೆ ಯಾವುದು?
7. ಅಕ್ವಿಲನೂ ಯಾವ ಕೆಲಸ ಮಾಡುತ್ತಿದ್ದನು?
8. ಎಪಫ್ರೊದೀತನು ಏನಾಗಿದ್ದನು?
9. ತ್ರೊಫಿಮನು ಅಸೌಖ್ಯವಾಗಿದ್ದಾಗ ಎಲ್ಲಿ ಇದ್ದನು?
10. ಬಾರ್ನಬನನ್ನು ಏನೆಂದು ಕರೆಯುತ್ತಿದ್ದರು?

**ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1) ಯಾಕೋಬನಿಗೆ
2) ಹನೋಕ
3) ಕಾನಾನ್ ದೇಶ
4) 969
5) 120
6) ಎಲೀಯನು
7) ಕುಂಟನಾಗಿದ್ದನು
8) ಹಿಜ್ಕೀಯನಿಗೆ
9) ಪೇತ್ರ
10) ದೆಬೋರಾ.

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

ನಾನು ಇನ್ನು ಮುಂದೆ ಸಮಸ್ತ ಜನಾಂಗಗಳನ್ನೂ ಸಕಲಭಾಷೆಯವರನ್ನೂ ಒಟ್ಟಿಗೆ ಬರಮಾಡುವೆನು (ಯೆಶಾ. 66:18).